ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ

ಅಧ್ಯಕ್ಷರು.—ಶ್ರೀ ಎನ್. ಎಂ. ಅದ್ಯಂತಾಯರವರಿಗೆ ಗೈರುಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

ಶ್ರೀ ಎನ್. ಎಂ. ಅದ್ಯಂತಾಯರವರಿಗೆ ಗೈರುಹಾಜರಾಗಲು ಅನುಮತಿ ನೀಡಲಾಯಿತು

ವಿತ್ತೀಯ ಕಾರ್ಯ ಕಲಾಪಗಳು

೧೯೮೮–೮೯ನೇ ಸಾಲಿಗೆ ಸಂಬಂಧಿಸಿದಂತೆ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆಗಳ ಸಂಖ್ಯೆ : ೧೦, ೩೭, ೩೮, ೫ ಮತ್ತು ೪೮.

(ರೇಷ್ಮೆ, ರಾಜ್ಯ ವಿಧಾನ ಮಂಡಲ, ನ್ಯಾಯ ಪರಿಪಾಲನೆ ಮೀನುಗಾರಿಕೆ, ರೇವು ಮತ್ತು ಜಲಸಾರಿಗೆ ಸೇವಾ ಇಲಾಖೆಗಳು)

ಶ್ರೀ ಜಿ. ರಾಜುಗೌಡ (ಹನೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆ ಸಂಖ್ಯೆ ೧೦, ೩೭, ೩೮, ೫ ಮತ್ತು ೪೮ ಅಂದರೆ ರೇಷ್ಮೆ ವ್ಯವಸಾಯ, ರಾಜ್ಯ ವಿಧಾನ ಮಂಡಲ, ನ್ಯಾಯ ಪರಿಪಾಲನೆ, ಮೀನುಗಾರಿಕೆ ರೇವು ಮತ್ತು ಜಲ ಸಾರಿಗೆ ಸೇವೆ ಈ ಇಲಾಖೆಗಳ ಬೇಡಿಕೆಗಳನ್ನು ನಾನು ಖಂಡತುಂಡವಾಗಿ ವಿರೋಧಿಸಿ ಕೆಲವು ವಿಚಾರಗಳನ್ನು ಪ್ರಸ್ತಾಪಮಾಡುವುದಕ್ಕೆ ಇಚ್ಛಿಸುತ್ತೇವೆ.

ಮಾನ್ಯ ಅಧ್ಯಕ್ಷರೇ. ಈ ರೇಷ್ಮೆ ಬಗ್ಗೆ ಕೆಲವು ವಿಚಾರಗಳನ್ನು ಪ್ರಪ್ರಥಮವಾಗಿ ಹೇಳಲು ನಾನು ಇಷ್ಟಪಡುತ್ತೇನೆ. ಕರ್ನಾಟಕ ರೇಷ್ಮೆ ಜಗತ್ ಪ್ರಸಿದ್ಧವಾದುದು. ಇದರ ಸೊಬಗು, ಇದರ ನಾವಿನ್ಯತೆ, ಸೌಂದರ್ಯ, ಇದರ ಶ್ರೀಮಂತಿಕೆ ಬೇರೆ ಯಾವುದರಿಂದಲೂ ತುಂಬಲು ಸಾಧ್ಯವಿಲ್ಲ. ಈ ರೇಷ್ಮೆಗೆ ೨೦೦ ವರ್ಷಗಳ ಚರಿತ್ರೆ ಇದೆ. ಇದು ಈ ರಾಜ್ಯದ ಕಲ್ಪವೃಕ್ಷ ಹಾಗೂ ಕಾಮಧೇನು. ಇದು ದುಡಿಮೆಗೆ ಪ್ರಾಧಾನವಾದ ಒಂದು ಕೈಗಾರಿಕೆಯಾಗಿದೆ. ಅತಿ ಕಡಿಮೆ ಬಂಡವಾಳದಲ್ಲಿ ಹೆಚ್ಚಿನ ಜನರಿಗೆ ವರ್ಷ ಪೂರ್ತಿ ಲಾಭದಾಯಕವಾದ ಉದ್ಯೋಗವನ್ನು ಕೊಡತಕ್ಕಂಥ ಹೆಸರುವಾಸಿಯಾದ ಗೃಹ ಕೈಗಾರಿಕೆ ಇದಾಗಿದೆ. ಒಂದು ಎಕರೆ ಹಿಪ್ಪುನೇರಳೆಯಲ್ಲಿ ಸುಮಾರು ಐದು ಜನರಿಗೆ ಹುಳುವಿನಿಂದ ಹಿಡಿದು ಬಟ್ಟೆಯಾಗುವವರೆಗೂ ವರ್ಷ ಪೂರ್ತಿ ಕೆಲಸವನ್ನು ಕೊಡತಕ್ಕಂಥ ಒಂದು ಒಳ್ಳೆಯ ಕೈಗಾರಿಕೆ. ಋತುಮಾನ ಅಡಚಣೆ ಇಲ್ಲದೆ ವರ್ಷ ಪೂರ್ತಿ ಈ ಕೈಗಾರಿಕೆಯನ್ನು ಈ ರಾಜ್ಯದಲ್ಲಿ ಮಾಡಲು ಸಾಧ್ಯ ಇದೆ. ರೇಷ್ಮೆ ಕೃಷಿ ಮತ್ತು ರೇಷ್ಮೆ ಕೈಗಾರಿಕೆ ಇಲ್ಲದಿದ್ದರೆ ಮೈಸೂರು, ಬೆಂಗಳೂರು, ತುಮಕೂರು ಮತ್ತು ಕೋಲಾರ ಸತತವಾಗಿ ಬರಗಾಲ ಪ್ರದೇಶವಾಗುತ್ತಿತ್ತು. The severity of drought is not felt in the area where Sericulture is there. ಈ ರೇಷ್ಮೆ ಕೈಗಾರಿಕೆ ಇಲ್ಲದಿದ್ದರೆ ಕ್ಷಾಮದ ಬಿಸಿ ಬಹಳವಾಗಿ ತಟ್ಟುತ್ತಿತ್ತು. ಎಲ್ಲಿ ರೇಷ್ಮೆ ಕೃಷಿ ಮತ್ತು ಕೈಗಾರಿಕೆ ಇದೆಯೋ ಅಲ್ಲಿ ಕ್ಷಾಮ ತಟ್ಟುವುದಿಲ್ಲ. ಬಂಡವಾಳ ಪ್ರಧಾನವಾದ ಕೈಗಾರಿಕೆಗಳಿಗಿಂತ ದುಡಿಮೆ ಪ್ರಧಾನವಾದ ಕೈಗಾರಿಕೆಗಳು ಹೆಚ್ಚು ಹೆಚ್ಚು ಗ್ರಾಮಾಂತರ ಪ್ರದೇಶಗಳಲ್ಲಿ ಬಂದರೆ ಅದರಿಂದ ಹೆಚ್ಚಿನ ಜನರಿಗೆ ಉದ್ಯೋಗ ಒದಗಿಸುವುದರ ಜೊತೆಗೆ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಅನುಕೂಲವಾಗುತ್ತದೆ. ಸ್ವಾಮಿ, ನೂರಾರು ಕೋಟಿ ರೂಪಾಯಿ ವಿದೇಶಿ ವಿನಿಮಯ ಗಳಿಸತಕ್ಕಂಥ ಈ ಒಂದು ಕೈಗಾರಿಕೆ ಈ ರಾಜ್ಯದಲ್ಲಿ ಇನ್ನೂ ಹೆಚ್ಚು ಅಭಿವೃದ್ಧಿಯಾಗಬೇಕಾಗಿರುವುದು ಬಹಳ ಅವಶ್ಯಕವಾಗಿದೆ. ಈ ಇಲಾಖೆಗೆ ಆಡಳಿತಾತ್ಮಕವಾಗಿ ಒಬ್ಬ ಡೈರೆಕ್ಟರ್ ಇರುತ್ತಾರೆ. ಯಾರು ಈ ಇಲಾಖೆಯಲ್ಲಿ ೨೦–೩೦ ವರ್ಷಗಳು ಸೇವೆ ಸಲ್ಲಿಸಿ ಹೆಚ್ಚು ಪರಿಣತಿಯನ್ನು ಪಡೆದಿದ್ದಾರೆ, ಅಂಥವರನ್ನು ಅಡಿಷನಲ್ ಡೈರೆಕ್ಟರಾಗಿ ಮಾಡಬೇಕೆಂದು ಕಳೆದಸಾರಿ ಈ ಸದನದಲ್ಲಿ ನಾನು ಸೂಚನೆ ಮಾಡಿದ್ದೆ. ಆದರೆ ಅದು ಇನ್ನೂ ಕಾರ್ಯಗತವಾಗಲಿಲ್ಲ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಹತ್ತು ಜನ ಜಾಯಿಂಟ್ ಡೈರೆಕ್ಟರುಗಳು ಇರುವಾಗ ಇಬ್ಬರು ಡೈರೆಕ್ಟರ್ಸ್ ಏತಕ್ಕೆ ಇರಬಾರದು ಹತ್ತು ಜನ ಜಾಯಿಂಟ್ ಡೈರೆಕ್ಟರುಗಳಲ್ಲಿ ಒಬ್ಬರನ್ನು ಅಡಿಷನಲ್ ಡೈರೆಕ್ಟರಾಗಿ ಏತಕ್ಕೆ ಮಾಡಬಾರದು. ಈ ಉದ್ದಿಮೆ ಹೆಚ್ಚು ಬೆಳೆಯಲು ಅವಕಾಶವಿರುವುದರಿಂದ ಇದನ್ನು ಕೂಡಲೇ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನೂರಾರು ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯ ತರತಕ್ಕಂಥ ಈ ಕೈಗಾರಿಕೆಯನ್ನು ಅಲಕ್ಷ ಮಾಡುವುದು ಸರಿಯಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಹೊಸದಾಗಿ ರೇಷ್ಮೆ ಖಾತೆಯ ಸಚಿವರಾಗಿದ್ದಾರೆ. ಅವರು ನಾನು ಹೇಳುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಜಾರಿಗೆ ತರುತ್ತಾರೆಂದು ನಂಬಿದ್ದೇನೆ. ವಿಶ್ವಬ್ಯಾಂಕ್ ನೆರವಿನಿಂದ ಈ ಉದ್ದಿಮೆ ಅಭಿವೃದ್ಧಿಯಾಗುತ್ತಿದೆ. ರೇಷ್ಮೆ ಉತ್ಪಾದನೆಯಲ್ಲಿ ಕಳೆದ ವರ್ಷ ಭಾರತ ಜಪಾನನ್ನು ಹಿಂದಕ್ಕೆ ಹಾಕಿತು. ವಿಶ್ವದಲ್ಲಿ ಚೈನಾ ಬಿಟ್ಟರೆ ಎರಡನೇ ಸ್ಥಾನ ಭಾರತದ್ದು. ಅದರಲ್ಲೂ ಕರ್ನಾಟಕಕ್ಕೆ ಹೆಚ್ಚಿನ ಕೀರ್ತಿ ಇದರಿಂದ ಬಂದಿದೆ. ದಕ್ಷಿಣ ಕೊರಿಯಾ ಮತ್ತು ಜಪಾನ್. ರೇಷ್ಮೆ ಕೃಷಿಯಲ್ಲಿ ಹಿಂದಕ್ಕೆ ಸರಿದಿದೆ. ಕಾರಣ ಈಗ ರೇಷ್ಮೆ ಕೃಷಿಯನ್ನು ಉಷ್ಣವಲಯದಲ್ಲಿ ಮಾತ್ರವಲ್ಲ ಸಮಶೀತೋಷ್ಣ ವಲಯದಲ್ಲೂ ಕೂಡ ಮಾಡಬಹುದು. ಒಂದು ವರ್ಷದಲ್ಲಿ ಕೇವಲ ೫-೬ ತಿಂಗಳು ಮಾಡುತ್ತಿರುವುದರಿಂದ ಅವರೆಲ್ಲ ಹಿಂದೆ ಸರಿದಿದ್ದಾರೆ. ನೆಲ ಮತ್ತು ಜಲ ಅಂದರೆ ಎಲ್ಲಿ ಜನ ಮತ್ತು ಭೂಮಿ ಇದೆ ಅಲ್ಲಿ ಇದನ್ನು ಅಭಿವೃದ್ಧಿ ಪಡಿಸಲು ಸಾಧ್ಯವಿದೆ. ನಮ್ಮ ರಾಜ್ಯದಲ್ಲಿ ಧಾರಾಳವಾಗಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಈ ಎರಡು ಸೌಲಭ್ಯಗಳು ಸಿಗುತ್ತವೆ. ಅಲ್ಲಿ ಈ ಕೃಷಿಯನ್ನು ಹೆಚ್ಚು ಮಾಡಲು ಸಾಧ್ಯವಿದೆ. ನಮ್ಮ ರಾಜ್ಯಕ್ಕೆ ಈ ರೇಷ್ಮೆ ಕೃಷಿ ಒಂದು ಹೇಳಿ ಮಾಡಿಸಿದಂತಿದೆ. ಜಪಾನ್‌ನಲ್ಲಿ ಜನವೂ ಇಲ್ಲ ಭೂಮಿಯೂ ಇಲ್ಲ. ಆದರೆ ಇಲ್ಲಿ ಎರಡು ಇದೆ. ವಿಶ್ವದಲ್ಲಿ ತಯಾರಾಗತಕ್ಕಂಥ ರೇಷ್ಮೆ ೬೫ ಸಾವಿರ ಟನ್. ಇದರಲ್ಲಿ ಅರ್ಧಭಾಗ ಚೈನಾದ ಕೊಡುಗೆ. ಉಳಿದ ಅರ್ಧ ೮೬೦೦ ಟನ್ ಭಾರತದಲ್ಲಿಯೇ ಉತ್ಪಾದನೆ ಆಗುತ್ತದೆ. ೮,೦೦೦ ಟನ್ ಜಪಾನ್‌ನಲ್ಲಿ ಉತ್ಪಾದನೆ ಆಗುತ್ತದೆ. ೪,೦೦೦ ಟನ್ ಯು.ಎಸ್.ಎಸ್.ಆರ್. ನಲ್ಲಿ, ೨,೦೦೦ ಟನ್ ದಕ್ಷಿಣ ಕೊರಿಯಾದಲ್ಲಿ, ೧೬೦೦ ಟನ್ ಬ್ರೆಜಿಲ್‌ನಲ್ಲಿ ಉತ್ಪಾದನೆಯಾಗುತ್ತದೆ. ಹಿಪ್ಪನೇರಳೆ ಬೇಸಾಯ ರಾಜ್ಯದಲ್ಲಿ ೧೯೮೦-೮೧ ರಲ್ಲಿ ೧೧೪೮೦೦ ಹೆಕ್ಟೇರ್‌ನಲ್ಲಿತ್ತು. ೮೭-೮೮ ರಲ್ಲಿ ಇದು ೧೩೯೧೯ ಹೆಕ್ಟೇರ್‌ನಲ್ಲಿದೆ. ನಮ್ಮ ರಾಜ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿರತಕ್ಕ ಭೂಮಿ ಒಂದು ಕೋಟಿ ೩ ಲಕ್ಷದ ೫೬ ಸಾವಿರ ಹೆಕ್ಟೇರ್. ಈ ದೃಷ್ಟಿಯಿಂದ ನೋಡಿದಾಗ ಕೇವಲ ಶೇಕಡ ಒಂದರಷ್ಟು ಭೂಮಿಯಲ್ಲಿ ಹಿಪ್ಪನೇರಳೆ ಬೇಸಾಯ ಮಾಡುತ್ತಿದ್ದೇವೆ. ಬಹುಶಃ ಅದನ್ನು ತ್ರಿಗುಣ ಮಾಡಿದಾಗ ೭ನೇ ಪಂಚವಾರ್ಷಿಕ ಯೋಜನೆಯೊಳಗೆ ನಾವು ಏನು ನಿರೀಕ್ಷೆ ಮಾಡಿದ್ದೇವೆ. ಅವಕ್ಕಿಂತ ಹೆಚ್ಚು ರೇಷ್ಮೆಯನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್. — ಹಾಲಿ ರೇಷ್ಮೆ ಉದ್ಯಮಕ್ಕೆ ಉಪಯೋಗಿಸುತ್ತಿರತಕ್ಕ ಜಮೀನನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಈ ಉದ್ಯಮಕ್ಕೆ ಉಪಯೋಗಿಸತಕ್ಕ ಪ್ರಯತ್ನ ಹೆಚ್ಚಾಗಿ ನಡೆದಿಲ್ಲ ಎಂಬ ಮಾತನ್ನು ರಾಜೂಗೌಡರು ಹೇಳುತ್ತಾರೆ. ನಾನು ನನ್ನ ವರದಿಯಲ್ಲಿ ನಮೂದಿಸಿದ್ದೇನೆ, ಈಗಿರತಕ್ಕ ಭೂಮಿಯನ್ನು ಹೆಚ್ಚು ಮಾಡುವುದಕ್ಕಿಂತಲೂ ಈಗಿರತಕ್ಕ ಭೂಮಿಯಲ್ಲಿ ಹುಟ್ಟುವಳಿಯನ್ನು ಹೆಚ್ಚು ಮಾಡುವ ಪ್ರಯತ್ನ ಮಾಡುವುದರಿಂದ ಇದರ ಮೇಲೆ ಖರ್ಚು ಮಾಡತಕ್ಕ ಹಣದ ಪ್ರಮಾಣ ಕಡಿಮೆಯಾಗಿ ಉತ್ಪತ್ತಿ ಜಾಸ್ತಿಯಾಗಿ ಉದ್ದಿಮೆದಾರರಿಗೆ ಹೆಚ್ಚು ಅನುಕೂಲವಾಗುತ್ತದೆಂಬ ಮಾತನ್ನು ಹೇಳಿದ್ದೇನೆ. ಅದರ ಬಗ್ಗೆ ತಮ್ಮ ವ್ಯಾಖ್ಯಾನ ಹೇಳಿದರೆ ಒಳ್ಳೆಯದಾಗುತ್ತದೆ.

ಶ್ರೀ ಜಿ. ರಾಜೂಗೌಡ. — ಅದನ್ನು ನಾನು ಒಪ್ಪುತ್ತೇನೆ. ಈಗಿರತಕ್ಕ ವ್ಯವಸ್ಥೆಯಲ್ಲಿ ನಮ್ಮ ದೇಶದಲ್ಲಿರತಕ್ಕ ಬೇಡಿಕೆ ಇವತ್ತಿನ ದಿವಸ ೧೦,೧೫೦ ಟನ್. ನಾವು ಇಡೀ ದೇಶದಲ್ಲಿ ಉತ್ಪಾದನೆ ಮಾಡತಕ್ಕದ್ದು ೮೧೫೦ ಟನ್, ಇರತಕ್ಕ ವ್ಯವಸ್ಥೆಯಲ್ಲೇ ೨ ಸಾವಿರ ಟನ್ ಅನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಿದೆ. ಇವತ್ತಿನ ದಿವಸ ಮಳೆಯ ಆಶ್ರಯದಲ್ಲಿ ಬೆಳೆಯತಕ್ಕದ್ದು ಇದೆ. ೬೯ ಸಾವಿರ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಿದಾಗ ಹೆಚ್ಚು ರೇಷ್ಮೆ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಿಪ್ಪನೇರಳೆ ಬೇಸಾಯ ಏನಿದೆ ಅದನ್ನು ನೀರಾವರಿಗೆ ಒಳಪಡಿಸಿದಾಗ ಆ ಒಂದು ಕೊರತೆ ಏನಿದೆ ಅದನ್ನು ಮುಟ್ಟಲಿಕ್ಕೆ ಸಾಧ್ಯವಿದೆ. ನಮ್ಮ ದೇಶದಲ್ಲಿರತಕ್ಕ ಒಟ್ಟು ವ್ಯವಸಾಯ ಭೂಮಿಯನ್ನು ನೋಡಿದಾಗ ಇರತಕ್ಕ ಹಿಪ್ಪನೇರಳೆ ಎಷ್ಟಿದೆ ಎಂದರೆ ೦.೧೬ ಇದೆ. ಅದು ಶೇಕಡ ಒಂದಕ್ಕೆ ಏರಿದಾಗ

೫೦ ಸಾವಿರ ಟನ್ ಅನ್ನು ಮುಟ್ಟಲಿಕ್ಕೆ ಸಾಧ್ಯವಾಗುತ್ತದೆ. ಈ ಬೇಸಾಯದಿಂದ ೨ ಕೋಟಿ ಜನರಿಗೆ ಈ ದೇಶದಲ್ಲಿ ಉದ್ಯಮ ಕೊಡಲಿಕ್ಕೆ ಸಾಧ್ಯವಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ೬೦ ಸಾವಿರ ಜನ ಪ್ರತ್ಯಕ್ಷವಾಗಿದ್ದಾರೆ. ಅವರಲ್ಲಿ ೩೦ ಸಾವಿರ ಜನ ನಮ್ಮ ರಾಜ್ಯದಲ್ಲಿದ್ದಾರೆ. ೧೯೮೦-೮೧ ರಲ್ಲಿ ೯೦೦೬ ಹಳ್ಳಿಗಳಲ್ಲಿ ಈ ಕಸಬು ಇತ್ತು ಆಗ ಪ್ರತ್ಯಕ್ಷವಾಗಿ ೧.೯ ಲಕ್ಷ ಸಂಸಾರಗಳು ಮತ್ತು ಪರೋಕ್ಷವಾಗಿ ೨.೫೫ ಲಕ್ಷ ಸಂಸಾರಗಳು ಈ ಕಸಬಿನಲ್ಲಿ ನಿರತವಾಗಿದ್ದವು ೧೯೮೭-೮೮ ರಲ್ಲಿ ೧೬೫೦೦ ಹಳ್ಳಿಗಳಲ್ಲಿ ಪ್ರತ್ಯಕ್ಷವಾಗಿ ೨.೩೩ ಲಕ್ಷ ಸಂಸಾರಗಳಿದ್ದರೆ ಪರೋಕ್ಷವಾಗಿ ೩.೪೪ ಸಂಸಾರಗಳು ನಿರತವಾಗಿವೆ. ಅಂದರೆ ಒಟ್ಟು ೩೦ ಲಕ್ಷ ಜನರಿದ್ದಾರೆ ಭಾರತದ ದೊಡ್ಡ ರಾಜ್ಯವಾದ ಕರ್ನಾಟಕಕ್ಕೆ ೧೯೮೧-೮೨ರವರೆಗೆ ವಿಶ್ವ ಬ್ಯಾಂಕು ಕೊಟ್ಟಿರತಕ್ಕ ನೆರವು ೧೧ ಕೋಟಿ ರೂಪಾಯಿ ಇನಿದೆ ಅದರಲ್ಲಿ ರೇಷ್ಮೆ ಅಭಿವೃದ್ಧಿ ಕಾರ್ಯ ನಡೆಯುತ್ತಾ ಬಂದಿದೆ. ಈ ಅವಧಿಯಲ್ಲಿ ಅಂದರೆ ೧೯೮೧-೮೨ ರಲ್ಲಿ ೨೨೮೮ ಮೆಟ್ರಿಕ್ ಟನ್ ಕಚ್ಚಾ ರೇಷ್ಮೆ ಉತ್ಪಾದನೆಯಾದರೆ ೧೯೮೭-೮೮ರಲ್ಲಿ ೪೭೯೧ ಮೆಟ್ರಿಕ್ ಟನ್ ಉತ್ಪಾದನೆಯಾಗಿದೆ. ಹೀಗೆ ವಿಶ್ವ ಬ್ಯಾಂಕ್ ಕರ್ನಾಟಕದಲ್ಲಿ ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸತಕ್ಕ ವಿಷಯದಲ್ಲಿ ಯಶಸ್ವಿಯಾಯಿತು ಆದರೆ ವಿಶ್ವ ಬ್ಯಾಂಕ್ ಬಯಸಿರತಕ್ಕ ಬೈವೋಲ್ಟೀನ್ ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗಿಲ್ಲ. ಹಿಪ್ಪುನೇರಳೆ ಬೇಸಾಯವನ್ನು ಹೆಚ್ಚು ಮಾಡಿದರೆ ಬೈವೋಲ್ಟೀನ್ ರೇಷ್ಮೆಯನ್ನು ಹೆಚ್ಚು ಉತ್ಪಾದಿಸುವುದಕ್ಕೆ ಸಾಧ್ಯವಾಗುತ್ತದೆ ಇದರಿಂದ ರೇಷ್ಮೆ ಗೂಡಿನ ಉತ್ಪಾದನೆಯಲ್ಲಿ ಶೇಕಡ ೬೦ ರಷ್ಟು ಜಾಸ್ತಿಯಾಗುತ್ತದೆ. ಅಲ್ಲದೆ ಶೇಕಡ ೩೩ ರಷ್ಟು ರೇಷ್ಮೆ ಉತ್ಪಾದನೆ ಹೆಚ್ಚಾಗುತ್ತದೆ, ಚೀನಾ ಮತ್ತು ಹಾಂಕಾಂಗ್‌ನಲ್ಲಿ ಒಂದು ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ಇದ್ದರೆ. ೫೨ ಕೆ.ಜಿ ರೇಷ್ಮೆ ಉತ್ಪಾದನೆಯಾಗುತ್ತದೆ.

೪-೩೦ ಪಿ.ಎಂ.

ಜಪಾನಿನಲ್ಲಿ ಒಂದು ಎಕರೆ ಹಿಪ್ಪುನೇರಳೆಗೆ ೪೦ ಕೆ. ಜಿ. ರೇಷ್ಮೆ ಕೊಡುತ್ತಿದೆ. ನಮ್ಮಲ್ಲಿ ಒಂದು ಕೆ. ಜಿ. ರೇಷ್ಮೆಗೆ ಕೇವಲ ೧೪ ಕೆ. ಜಿ. ರೇಷ್ಮೆ ಕೊಡುತ್ತಿದೆ. ಹೇಗೆ ಎಂಬುದನ್ನು ಅಂಕಿಅಂಶಗಳ ಮುಖಾಂತರ ನಿರೂಪಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ೧೯೮೦-೮೧ ರಲ್ಲಿ ನಮ್ಮ ರಾಜ್ಯದಲ್ಲಿ ರೇಷ್ಮೆ ಕೃಷಿ ಇರತಕ್ಕದ್ದು .೮೭.೫೦೦ ಎಕರೆಗಳು. ಉತ್ಪತ್ತಿ ಆಗಿರತಕ್ಕದ್ದು ೨.೭೭೮ ಮೆಟ್ರಿಕ್ ಟನ್ ಅಥವಾ ೨೭.೭೮.೦೦೦ ಕೆ ಜಿ. ರೇಷ್ಮೆ. ಆಗ ಒಂದು ಎಕರೆಗೆ ೧೦ ಕೆ. ಜಿ. ಆಯಿತು ೧೯೮--೮೮ ರಲ್ಲಿ ರೇಷ್ಮೆ ಕೃಷಿ ಆಗಿರತಕ್ಕದ್ದು ೩.೪೪.೭೭೨ ಎಕರೆಗಳಲ್ಲಿ ಆಗ ೪.೭೯೧ ಮೆಟ್ರಿಕ್ ಟನ್ ಅಥವಾ ೪೭.೯೧.೦೦೦ ಕೆ. ಜಿ. ರೇಷ್ಮೆ ಉತ್ಪಾದನೆ ಆಯಿತು. ಅದರೆ ಪ್ರತಿ ಎಕರೆಗೆ ೧೪ ಕೆ. ಜಿ. ರೇಷ್ಮೆ ಬಂತು. ನಮ್ಮ ರಾಜ್ಯದಲ್ಲಿರತಕ್ಕ ಹಿಪ್ಪುನೇರಳೆ ಬೇಸಾಯದಲ್ಲಿ ಮಳೆ ಆಶ್ರಯದಲ್ಲಿ ೬೧.೪೭೪ ಹೆಕ್ಟೇರ್ಸ್ ಇದೆ ನೀರಾವರಿಯಿಂದ ಬೇಸಾಯ ಮಾಡತಕ್ಕದ್ದು ೭೧.೪೩೫ ಹೆಕ್ಟೇರ್ಸ್ ಇದೆ. ಈ ೬೧.೪೭೪ ಹೆಕ್ಟೇರನ್ನು ನೀರಾವರಿಗೆ ಒಳಪಡಿಸಿದಾಗ ಅದಕ್ಕೆ ಎಂಫೆರ್ ಕಡ್ಡಿ ಹಾಕಿದಾಗ ಹೆಚ್ಚು ರೇಷ್ಮೆ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹೇಗೆ? ಉದಾಹರಣೆಗಾಗಿ ತಮಗೆ ಹೇಳುವುದಾದರೆ ಸಾಮಾನ್ಯವಾಗಿ ಒಂದು ಎಕರೆಯಲ್ಲಿ ೧೦ ಸಾವಿರ ಕೆ. ಜಿ. ಸೊಪ್ಪು ಬರುತ್ತದೆ ೮೦೦ ಕೆ. ಜಿ. ಸೊಪ್ಪಿನಲ್ಲಿ ೧೦೦ ಮೊಟ್ಟೆ ಸಾಕಬಹುದು. ೧೦ ಸಾವಿರ ಕೆ. ಜಿ. ಅಂದರೆ ಒಂದು ವರ್ಷದಲ್ಲಿ ಒಂದು ಎಕರೆಗೆ ೨೭೫ ಕೆ. ಜಿ. ಗೂಡು ಬೆಳೆಯುತಕ್ಕದ್ದು ೯½ ಕೆ. ಜಿ. ಗೆ ಒಂದು ಗೂಡು ಎಂದು ಲೆಕ್ಕ ಹಾಕಿ ಕೊಂಡರೂ ೪೭ ಕೆ. ಜಿ. ರೇಷ್ಮೆ ಬರುತ್ತದೆ. ಅಂದರೆ ಜಪಾನಿನಲ್ಲಿ ಏನು ಬೆಳೆಯುತ್ತಾರೋ ಅಷ್ಟು ನಾವು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಮಳೆ ಆಶ್ರಯದಲ್ಲಿ ಬೆಳೆಯುತ್ತಕ್ಕ ಹಿಪ್ಪುನೇರಳೆ ಬೆಳೆಯನ್ನು ನೀರಾವರಿಗೆ ಒಳಪಡಿಸಿದಾಗ. ಎಂ. ಫೆರ್ ಕಡ್ಡಿ ಹಾಕಿದಾಗ, ಸೊಪ್ಪಿನ ಫಲವತ್ತಿನ ಪ್ರಮಾಣವನ್ನು ಜಾಸ್ತಿ ಮಾಡಿದಾಗ ೯೧/೨ ಕೆ ಜಿ ಗೆ ಒಂದು ಕೆ. ಜಿ. ರೇಷ್ಮೆ ಬಂದಾಗ ನಾವು ಒಂದು ಎಕರೆಯಲ್ಲಿ ೪೦ ಕೆ. ಜಿ. ರೇಷ್ಮೆ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರ ಗಮನಿಸಬೇಕಾದ ವಿಷಯ ಎಂದರೆ ೬೧,೪೭೪ ಹೆಕ್ಟೇರ್ ಏನಿದೆ, ಆ ಜಮೀನನ್ನು ನೀರಾವರಿಗೆ ಒಳಪಡಿಸುವ ಕೆಲಸ ಮಾಡಬೇಕು. ಹೇಗೆ? ತಾವು ಕೊಡತಕ್ಕ ಸವಲತ್ತುಗಳು ಕೃಷಿಕನ ಮನೆ ಬಾಗಿಲಿಗೆ ಹೋಗುವಂತೆ ನೋಡಿಕೊಳ್ಳತಕ್ಕದ್ದು, ಬಾವಿ ತೋಡಿಸತಕ್ಕದ್ದು, ನೀರು ಒದಗಿಸುವುದು. ಇದಕ್ಕೆ ಗಮನ ಕೊಟ್ಟರೆ ಈ ಕೆಲಸ ಆಗುತ್ತದೆ, ನಮ್ಮ ದೇಶದಲ್ಲಿ ೧೧.೧೫೦ ಟನ್ ರೇಷ್ಮೆ ಉತ್ಪಾದನೆಯಾಗುತ್ತಿದೆ. ನಾನು

ಸಲಹೆ ಕೊಟ್ಟಂತೆ ಮಾಡಿದರೆ ಇನ್ನೂ ಹೆಚ್ಚು ಉತ್ಪಾದನೆ ಮಾಡಬಹುದು ಇನ್ನೂ ಯಾವರೀತಿ ಹೆಚ್ಚು ಉತ್ಪಾದನೆ ಮಾಡುವುದಕ್ಕಾಗುತ್ತದೆ ಎಂಬ ಬಗ್ಗೆ ಸ್ವಲ್ಪ ವಿವರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ೨ ಸಾವಿರ ಮೆಟ್ರಿಕ್ ಟನ್ ಕೊರತೆ ಬಂದಾಗ ಬೇಡಿಕೆ ಹೆಚ್ಚಾಯಿತು. ಬೇಡಿಕೆ ಹೆಚ್ಚಾದಾಗ ಬೆಲೆ ದುಬಾರಿಯಾಯಿತು. ಡಿಸೆಂಬರ್ ೮೭ ರಲ್ಲಿ ಬೆಲೆ ಅಧಿಕ ಆಯಿತು. ಆಗ ಎಲ್ಲಾ ನೇಯ್ಗೆಯವರು ದುಬಾರಿ ಬೆಲೆ ಬಗ್ಗೆ ಪ್ರತಿಭಟಿಸಬೇಕಾಯಿತು. ರಾಜ್ಯದ ಕೈಮಗ್ಗದವರು, ಪವರ್‌ಲೂಮಿನವರು ಇದಕ್ಕೆ ಬೆಂಬಲ ಸೂಚಿಸಿದರು. ದಿನಾಂಕ ೪-೧-೮೮ ರಂದು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಬೇಡಿಕೆಯನ್ನು ಮುಂದಿಟ್ಟರು. ಅದರಲ್ಲಿ ಪ್ರಮುಖವಾದ ಬೇಡಿಕೆಗಳು ಏನು ? ಕರ್ನಾಟಕದ ನೇಯ್ಗೆಯವರಿಗೇ ರೇಷ್ಮೆ ಕೊರತೆ ಇರುವಾಗ ಹೊರಗಡೆಗೆ ರೇಷ್ಮೆ ಕಳುಹಿಸಬಾರದು ಎಂಬುದು ಪ್ರಮುಖ ಬೇಡಿಕೆಯಾಗಿತ್ತು. ಇನ್ನೊಂದು ರಾಜ್ಯದಲ್ಲಿ ರೇಷೆ ಕೊರತೆ ಬಂದಾಗ ರೇಷ್ಮೆ ಮಾರುಕಟ್ಟೆ ಮಂಡಲಿಯವರು ಹರಾಜಿನಲ್ಲಿ ಭಾಗವಹಿಸಬಾರದು ಎಂಬುದು ಎರಡು ಪ್ರಮುಖ ಬೇಡಿಕೆಗಳನ್ನು ಮುಖ್ಯಮಂತ್ರಿಗಳ ಮುಂದಿಟ್ಟರು. ಆಗ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಂದು ಸಮಿತಿಯನ್ನು ಗೊತ್ತು ಮಾಡುತ್ತೇನೆ, ಆ ಸಮಿತಿಯಿಂದ ಸಮಸ್ಯೆಯನ್ನು ಅಧ್ಯಯನ ಮಾಡಿಸಿ ಪರಿಹಾರ ಸಿಗುವಂತೆ ಮಾಡುತ್ತೇನೆ ಎಂದು ಹೇಳಿದರು. ಆದರೆ ಸಮಿತಿ ಪರಿಹಾರ ಗೊತ್ತು ಮಾಡಲಿಲ್ಲ. ಮಾರ್ಚಿ ೮೮ ರ ನಂತರ ಬೆಲೆ ಕುಸಿದುಹೋಯಿತು. ರೇಷ್ಮೆ ಬೆಳೆಗಾರರಿಗೆ ತೊಂದರೆಯಾಯಿತು. ರೇಷ್ಮೆ ಮಾರಾಟ ಮಂಡಲಿಯಲ್ಲಿ ದಾಸ್ತಾನು ಕೊಳೆಯುತ್ತಾ ಬಿದ್ದಿದೆ. ಈಗ ಎರಡು ಸಾವಿರ ಕೆ. ಜಿ. ಹೆಚ್ಚಿಗೆ ರೇಷ್ಮೆಯನ್ನು ಯಾವ ರೀತಿ ಹೆಚ್ಚು ಮಾಡುವುದಕ್ಕೆ ಸಾಧ್ಯ ಎಂಬುದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ೧೯೮೦-೮೧ ರಲ್ಲಿ ೧೬.೧೬,೬೭,೦೦೦ ಮೊಟ್ಟೆ ಕೊಟ್ಟು ೩,೯೮,೬೬ ೦೦೦ ಕೆ. ಜಿ. ಗೂಡು ಮಾಡಿದ್ದೆವು. ಆಗ ೫ ಮೊಟ್ಟೆಗೆ ಒಂದು ಕೆ. ಜಿ. ಗೂಡು ಆಯಿತು. ೧೯೮೭-೮೮ ರಲ್ಲಿ ೨೦.೧೮ ಕೋಟಿ ಮೊಟ್ಟೆ ಕೊಟ್ಟು ೪೭,೨೦೫ ಮೆಟ್ರಿಕ್ ಟನ್ ಗೂಡು ಉತ್ಪನ್ನ ಆಯಿತು. ಆಗ ಮೂರುವರೆ ಮೊಟ್ಟೆ ಒಂದು ಕೆ. ಜಿ. ಗೂಡು ಆಯಿತು, ನಾನು ಹೇಳತಕ್ಕದ್ದು ಎರಡೂವರೆ ಮೊಟ್ಟೆಗೆ ಒಂದು ಕೆ. ಜಿ. ಗೂಡು ಉತ್ಪಾದನೆಯಾದರೆ ೨೦ ಕೋಟಿ ಮೊಟ್ಟೆಗೆ ೮೦೦ ಲಕ್ಷ ಕೆ.ಜಿ ಗೂಡು ಉತ್ಪಾದನೆ ಆಗುತ್ತದೆ. ಅಂದರೆ ೮೦೦೦ ಕೆ.ಜಿ. ರೇಷ್ಮೆ ಆಗುತ್ತದೆ. ಈಗ ದೇಶದಲ್ಲಿ ಉತ್ಪಾದನೆಯಾಗುವ ರೇಷ್ಮೆ ಎಷ್ಟಿದೆ, ಅಷ್ಟು ನಮ್ಮ ರಾಜ್ಯದಲ್ಲಿ ಉತ್ಪಾದನೆ ಆಗುತ್ತದೆ. ಆಗ ೨ ಸಾವಿರ ಕೇಜಿಯ ಕೊರತೆಯನ್ನು ನೀಗಬಹುದು. ಆದ್ದರಿಂದ ಈಗ ಇರತಕ್ಕ ೩ ತಳಿಗಳನ್ನೂ ಅಭಿವೃದ್ಧಿ ಪಡಿಸುವ ಬಗ್ಗೆ ಹೆಚ್ಚು ಗಮನ ಕೊಡಬೇಕು. ಇದಕ್ಕಾಗಿ ಸಂಶೋಧನಾ ಕೇಂದ್ರಗಳನ್ನೂ ಕೂಡ ತೆಗೆದಿದ್ದಾರೆ ಸಂಸ್ಥೆಗಳನ್ನು ಇದಕ್ಕಾಗಿಯೇ ತೆಗೆದಿದ್ದಾರೆ. (೧) ಕೇಂದ್ರೀಯ ಸಂಶೋಧನಾ ತರಬೇತಿ ಕೇಂದ್ರ, ಮೈಸೂರು, (೨) ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಸಂಸ್ಥೆ ತಲಘಟ್ಟಪುರ, (೩) ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು (೪) ಬೆಂಗಳೂರು ವಿಶ್ವವಿದ್ಯಾನಿಲಯ ಹಾಗೂ (೫) ಮೈಸೂರು ವಿಶ್ವವಿದ್ಯಾನಿಲಯ. ಈ ೫ ಸಂಸ್ಥೆಗಳು ಏನು ಇವೆ. ಇವುಗಳು ರೇಷ್ಮೆ ತಳಿಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಏನೂ ಮಾಡಿಯೇ ಇಲ್ಲ. ಅಲ್ಲಿರತಕ್ಕ ವಿಜ್ಞಾನಿಗಳು ಈ ತಳಿಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಏನೂ ಮಾಡಿಲ್ಲ. ಆದರೆ ಬೇರೆಲ್ಲಾ ಮಾಡಿದ್ದಾರೆ. ದವಸ ಧಾನ್ಯಗಳ ಬಗ್ಗೆ ಸಂಶೋಧನೆ ಮಾಡಿದ್ದಾರೆ. ೨-೬ ಟನ್ ಬೆಳೆಯುತಕ್ಕಂತಹ ಪ್ರದೇಶದಲ್ಲಿ ಇವತ್ತು ೨೦-೨೫ ಟನ್ ಬೆಳೆ ಬೆಳೆಯುತಕ್ಕಂತಹದ್ದರಲ್ಲಿ ಸಂಶೋಧನೆ ಮಾಡಿದ್ದಾರೆ. ಆದರೆ ರೇಷ್ಮೆ ಗೂಡು ಬೆಳೆಯುವುದರಲ್ಲಿ. ಹಾಗೂ ರೋಗ ರಹಿತ ಮೊಟ್ಟೆಗಳನ್ನು ಸರಬರಾಜು ಮಾಡುವುದರಲ್ಲಿ ಬಹಳ ವಿಫಲರಾಗಿದ್ದಾರೆಂದು ನಾನು ಘಂಟಾಘೋಷವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಅಧಿಕಾರಿಗಳಲ್ಲಿ ಇರತಕ್ಕ ಅನಾಸಕ್ತಿಯೇ ಕಾರಣ. ಅವರಲ್ಲಿರತಕ್ಕ ಆಸಕ್ತಿಯ ಅಭಾವವೇ ಇದಕ್ಕೆ ಕಾರಣ. ಅವರು ಆಸಕ್ತಿ ವಹಿಸಿದರೆ ಖಂಡಿತವಾಗಿಯೂ ಇದನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯ ಇದೆ. ಅಧಿಕಾರಿಗಳಲ್ಲಿ ರೇಷ್ಮೆ ಗೂಡನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಇರುವಂತಹ ಅಭಾವ ಎದ್ದು ಕಾಣುತ್ತದೆ. ಆ ಕಡೆ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತಿದ್ದೇನೆ ಇದರ ಜೊತೆಗೆ ಮತ್ತೊಂದು ಮುಖ್ಯವಾದ ಸಂಗತಿ ಎಂದರೆ ನಮ್ಮ ದೇಶದ ಅತ್ಯುತ್ತಮ ರೇಷ್ಮೆ, ಚೈನಾದಲ್ಲಿ ಎಚ್ ಕ್ಯಾಟಗರಿಗೆ ಸೇರಿಸುತ್ತಾರೆ, ಅವರು ೨ ಎ, ೩ ಎ ಅಂತ ಕರೆಯುತ್ತಾರೆ, ನಮ್ಮದು "ಎಚ್'' ಬಹಳ ಕಳಪೆಯದ್ದು ಎಂದು ಅವರು ತೀರ್ಮಾನ ಮಾಡಿದ್ದಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮದು ಅತ್ಯಂತ ಕಳಪೆಯದು

ಏಕೆ ನಮ್ಮ ರೇಷ್ಮೆ ಹಾಗೆ ಆಗುತ್ತದೆಂದರೆ, ಒಳ್ಳೆಯ ರೇಷ್ಮೆಯನ್ನು ತಯಾರು ಮಾಡುತ್ತಿದ್ದರೂ ಸಹ............

ಶ್ರೀ ಎ. ಲಕ್ಷ್ಮೀಸಾಗರ್.—ತಾವು ರೇಷ್ಮೆ ಬಗ್ಗೆ ಬಹಳ ಚೆನ್ನಾಗಿ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಕೊರಿಯಾ, ಜಪಾನ್, ಚೈನಾ ಅಂತೆಲ್ಲಾ ಹೇಳುತ್ತಿದ್ದೀರಿ. ತಾವೇನಾದರೂ ಅಲ್ಲಿಗೆ ಹೋಗಿ ವಿಷಯ ತಿಳಿದುಕೊಂಡು ಬಂದು ಮಾತನಾಡುತ್ತಿದ್ದೀರಾ ಹೇಗೆ ? ಇಷ್ಟೊಂದು ಚೆನ್ನಾಗಿ ಮಾತನಾಡುತ್ತಿದ್ದೀರಿ. ಅದಕ್ಕಾಗಿ ನನ್ನ ಮನಸ್ಸಿನಲ್ಲಿ ಸಂಶಯ ಉಂಟಾಯಿತು.

ಶ್ರೀ ಜಿ. ರಾಜುಗೌಡ.—ಅಲ್ಲಿಗೆ ಹೋಗುವುದಕ್ಕೆ ಪ್ರಯತ್ನ ಮಾಡಿದ್ದೆ. ಆದರೆ ನನ್ನನ್ನು ಕಳುಹಿಸಿಕೊಡಲಿಲ್ಲ. ಅಧಿಕಾರಿಗಳನ್ನು ಮಾತ್ರ ತಂಡ ತಂಡವಾಗಿ ಕಳುಹಿಸಿಕೊಡುತ್ತಿದ್ದೀರಿ. ನನ್ನನ್ನೂ ಕಳುಹಿಸಿಕೊಡಿ. ಹೋಗಿ ವಿಷಯ ತಿಳಿದುಕೊಂಡು ಬರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಮುಂದಿನ ಸಾರಿಯಾದರೂ ಪ್ರಯತ್ನ ಮಾಡಿನೋಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಮನಸ್ಸು ಮಾಡಿದರೆ ಯಾರ ಸಹಾಯವೂ ಇಲ್ಲದೇ ಅವರೇ ಹೋಗಿ ನೋಡಿಕೊಂಡು ಬರಬಹುದು.

ಶ್ರೀ ಜಿ. ರಾಜುಗೌಡ.—ನೂಲು ಬಿಚ್ಚತಕ್ಕಂತಹ ವಿಚಾರದಲ್ಲಿ ಹೇಳುವುದಾದರೆ, ಒಂದೇ ಸಮನಾದ ಎಳೆಯನ್ನು ಅಥವಾ ಜೂಟನ್ನು ತೆಗೆದುಕೊಂಡು ಅದನ್ನು ಜೋಡಿಸತಕ್ಕ ನಯಗಾರಿಕೆ ನಮ್ಮಲ್ಲಿಲ್ಲ. ೨೨-೨೦, ೨೦-೧೮ ಹಾಗೂ ೧೪-೧೬ ಆಗಲಿ ಒಂದೇ ಸಮನಾಗಿ ದಾರವನ್ನು ತೆಗೆದು ಎಳೆಯನ್ನಾಗಿ ಮಾಡತಕ್ಕ ಕಲೆಗಾರಿಕೆ ನಮ್ಮಲ್ಲಿಲ್ಲ. ಇನ್ನೂ ಗುಡಿ ಕೈಗಾರಿಕೆಯ ಅವಸ್ಥೆಯಲ್ಲೇ ಇದೆ. ಇದು ಸಾಲದು ಇದನ್ನು ಸುಧಾರಿಸಲು ಹಾಗೂ ಜನಪ್ರಿಯ ಗೊಳಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ

ರೇಷ್ಮೆ ಕೃಷಿಕ ಸೊಪ್ಪನ್ನು ಬೆಳೆದು ಹುಳುವನ್ನು ಸಾಕುತ್ತಾನೆ. ಹುಳು ಆ ಸೊಪ್ಪನ್ನು ತಿಂದು ಗೂಡನ್ನು ಕಟ್ಟುತ್ತದೆ. ಆ ಗೂಡುಗಳನ್ನು ತಂದು ರೇಷ್ಮೆ ಮಾರುಕಟ್ಟೆಯಲ್ಲಿ ರೇಷ್ಮೆ ಕೃಷಿಕ ಮಾರಾಟ ಮಾಡುತ್ತಾನೆ. ನೂಲುವವರು ಅದನ್ನು ಕೊಂಡು ಕೊಂಡು ರೇಷ್ಮೆ ಬಿಚ್ಚುತ್ತಾರೆ. ರೇಷ್ಮೆಯನ್ನು ವರ್ತಕರು ಕೊಂಡುಕೊಂಡು ಅದನ್ನು ನೇಕಾರರಿಗೆ ಕೊಡುತ್ತಾರೆ ನೇಕಾರರು ಜವಳಿಯನ್ನಾಗಿ ಮಾಡಿ ಮಾರಾಟ ಮಾಡುತ್ತಾರೆ. ರೇಷ್ಮೆ ಕೃಷಿಕನಿಂದ ಹಿಡಿದು ಜವಳಿಯನ್ನು ಮಾರಾಟ ಮಾಡುವವರೆಗೆ ಯಾರ್ಯಾರಿಗೆ ಎಷ್ಟೆಷ್ಟು ಲಾಭ ಸಿಕ್ಕುತ್ತದೆ ಎಂಬುದನ್ನು ವಿಶ್ಲೇಷಣೆ ಮಾಡಿದಾಗ ಗೂಡಿನ ಮೌಲ್ಯ ಎಷ್ಟು ಇದೆ ಎಂಬುದು ಗೊತ್ತಾಗುತ್ತದೆ. ಒಂದು ರೂಪಾಯಿಯ ವರಮಾನದಲ್ಲಿ ಶೇ. ೧೬.೮ ರಷ್ಟು ಕೃಷಿಕರಿಗೆ, ೬.೮ ಪರ್ಸೆಂಟ್ ರೀಲರಿಗೆ, ೯.೧ ಪರ್ಸೆಂಟ್ ಹುರಿಕಾರರಿಗೆ, ೧೦.೨ ಪರ್ಸೆಂಟ್ ನೇಕಾರರಿಗೆ ಹಾಗೂ ೧೬.೬ ಪರ್ಸೆಂಟ್ ವರ್ತಕರಿಗೆ. ಈ ತರಹ ಲಾಭ ಸಿಕ್ಕುತ್ತದೆ. ಈ ಸಂದರ್ಭದಲ್ಲಿ ರೇಷ್ಮೆ ಕೃಷಿಕನಿಗೆ ಹೆಚ್ಚು ಲಾಭ ಸಿಕ್ಕುತ್ತದೆಂದು ಹೇಳುತ್ತಾರೆ. ಆ ಒಂದು ದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡಿದಾಗ ನಮ್ಮ ಸರ್ಕಾರದ ಬಿತ್ತನೆ ಕೋಠಿಯಲ್ಲಿ ಮೊಟ್ಟೆಯನ್ನು ತೆಗೆದುಕೊಂಡು ಬಂದು ಹುಳುವನ್ನು ಸಾಕುತ್ತಾನೆ. ಕೊನೆ ಹಂತದಲ್ಲಿ ಖನೇ ಜ್ವರ ಬಂದಾಗ ಕೆಲವು ರೋಗ ಬಂದು ಹುಳು ಸತ್ತು ಹೋದಾಗ ಆ ರೇಷ್ಮೆ ಕೃಷಿಕ ಹಾಕಿದಂತಹ ಬಂಡವಾಳ, ಅವನು ಸಾಮಾನ್ಯವಾಗಿ ಒಂದು ತಿಂಗಳವರೆಗೆ ಪಟ್ಟಂತಹ ಶ್ರಮ ಎಲ್ಲವೂ ನಷ್ಟವಾಗುತ್ತದೆ. ಇಷ್ಟು ನಷ್ಟ ಬೇರೆ ಯಾರಿಗೂ ಆಗುವುದಿಲ್ಲ. ಹೆಚ್ಚು ನಷ್ಟ ರೈತರಿಗೇ. ಆ ದೃಷ್ಟಿಯಿಂದ ನೋಡಿದಾಗ ಎಲ್ಲರಿಗೂ ಈ ಉದ್ದಿಮೆಯಲ್ಲಿ ಪ್ರೋತ್ಸಾಹ ಕೊಟ್ಟು ಎಲ್ಲರೂ ಹೆಚ್ಚು ಹೆಚ್ಚು ಈ ಉದ್ದಿಮೆಯಲ್ಲಿ ತೊಡಗಬೇಕಾದರೆ ಅವರಿಗೆ ಒಳ್ಳೆಯ ಮೊಟ್ಟೆಯನ್ನು ಒದಗಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಅವನೇ ತನ್ನ ಕಯ್ಯಾರ ನಷ್ಟ ಮಾಡಿಕೊಂಡರೆ ಆ ವಿಚಾರ ಬೇರೆ. ರೋಗದಿಂದ ಹುಳು ಸತ್ತು ಹೋಗಿ ರೇಷ್ಮೆ ಗೂಡು ಕಟ್ಟದೇ ಇದ್ದಾಗ ನೀವು ವಿಮೆ ಮಾಡಿಸುವುದರ ಮೂಲಕ ಅವರಿಗೆ ಹಣ ಕೊಟ್ಟರೆ ಹೆಚ್ಚಿನ ಜನ ಈ ವ್ಯವಸ್ಥೆಗೆ ಬರುತ್ತಾರೆ. ಒಂದು ವರ್ಷದಲ್ಲಿ ೬-೮ ಬೆಳೆಗಳನ್ನು ಮಾಡಿದಾಗ ಎಲ್ಲಾ ಬೆಳೆಗಳೂ ಆಗುವುದಿಲ್ಲ. ಇದರಲ್ಲಿ ೨-೩ ಬೆಳೆಗಳು ಹೋಗುತ್ತವೆ. ಕೊಕ್ಕೆ ರೋಗ, ಆ ರೋಗ, ಈ ರೋಗ ಎಂದು ಇವಕ್ಕೆ ಬರುವುದು ಇದೆ. ಇದನ್ನು ತಡೆಗಟ್ಟುವ ಜೊತೆಗೆ ರೈತರಿಗೆ ಮೊಟ್ಟೆಗಳನ್ನು ಕೊಡುವ ಸಮಯದಲ್ಲಿ

ಆದರ ಬೆಲೆ ಜೊತೆ ಒಂದೆರಡು ರೂಪಾಯಿ ಹೆಚ್ಚು ಪಡೆದು ಇನ್‌ಷೂರ್ ಮಾಡಿ ಹುಳು ಹೋಗೆ ಸಂದರ್ಭದಲ್ಲಿ ಕೆಲವು ಅಂಶವ ಪರಿಹಾರ ಅವರಿಗೆ ಕೊಟ್ಟರೆ ಹೆಚ್ಚು ಜನರಿಗೆ ಪ್ರೋತ್ಸಾಹ ಕೊಟ್ಟಹಾಗ ಆಗುತ್ತದೆ. ದಯಮಾಡಿ ಈ ಕೆಲಸವನ್ನು ತಾವು ಮಾಡಬೇಕು. ಸಮಾಜದಲ್ಲಿ ಅತಿ ಹೆಚ್ಚಿದ ಸಂಪತ್ತನ್ನು ಮೇಲ್ವರ್ಗದಿಂದ ಕೆಳವರ್ಗಕ್ಕೆ ಹಸ್ತಾಂತರ ಮಾಡುವಂತಹ ಕೈಗಾರಿಕೆ ಇದಾಗಿದೆ. ಒಂದು ರೇಷ್ಮೆ ಸೀರೆಯು ಬೆಲೆ ೧೫೦೦ ರಿಂದ ೨೦೦೦ ರೂಪಾಯಿಯಾಗುತ್ತದೆ. ಆದ್ದರಿಂದ ಶ್ರೀಮಂತರು ಇನ್ನು ಕೊಂಡಾಗ ಮೇಲ್ದರ್ಜೆಯವರ ಸಂಪತ್ತು ಕೆಳವರ್ಗದವರಿಗೆ ಹಸ್ತಾಂತರವಾಗುತ್ತದೆ. ಇದಕ್ಕೆ ಹೆಚ್ಚಿನ ಒಂದು ಬಂಡವಾಳ ಬೇಕಾಗಿಲ್ಲ. ಇದರಿಂದ ಹೆಚ್ಚು ಜನರಿಗೆ ಉದ್ಯೋಗವನ್ನೂ ಕೊಡಬಹುದು. ಇವತ್ತು ನಮ್ಮ ದೇಶದಲ್ಲಿರತಕ್ಕ ತಳಿ ಬಗ್ಗೆ, ಸೃಷ್ಟಿಮಾಡುವ ಗೂಡಿನ ಬಗ್ಗೆ ಅಂತರರಾಷ್ಟ್ರೀಯ ಮಾರು ಕಟ್ಟೆಯಲ್ಲಿ ಸಾಧಿಸಬೇಕಾದುದು ಬಹಳ ಇದೆ. ಇದನ್ನು ನಾನು ಬಹಳ ವ್ಯಸನದಿಂದ ಹೇಳುತ್ತಿದ್ದೇನೆ. ಜಪಾನ್‌ನಲ್ಲಿ ೫ ಕೇಜಿಗೆ ೧ ಕೇಜಿ ರೇಷ್ಮೆ ಬರುತ್ತದೆ. ನಮ್ಮಲ್ಲೂ ಹಿಂದೆ ೧೮ ಕೇಜಿಗೆ ೧ ಕೇಜಿ ಬರುತ್ತಿತ್ತು. ನಮ್ಮಲ್ಲೂ ತಜ್ಞರು, ನಿಪುಣರು ಸಂಶೋಧನೆ ನಡೆಸಿದ್ದು ಒಂಭತ್ತೂವರೆ ಅಥವಾ ೧೦ ಕೇಜಿಗೆ ಒಂದು ಕೇಜಿ ರೇಷ್ಮೆ ಈಗ ಬರುತ್ತಿದೆ. ಜಪಾನಿನ ಒಂದು ಗೂಡಿನಿಂದ ೧೨೦೦ ರಿಂದ ೧೫೦೦ ಮೀಟರ್ ದಾರ ಬಂದರೆ ನಮ್ಮ ಗೂಡಿನಲ್ಲಿ ೮೦೦ ರಿಂದ ೯೦೦ ಮೀಟರ್ ದಾರ ಬರುತ್ತದೆ. ಜಪಾನಿನ ಗೂಡಿನಲ್ಲಿ ಒಳಗೆ ಇರುವ ಚಿಟ್ಟೆ ಗೂಡಿನಿಂದ ಹೊರಗೆ ಬರಬೇಕಾದರೆ ಬಹಳ ಕಷ್ಟ ಇದೆ. ಆದ್ದರಿಂದ ಅಲ್ಲಿ ಏನು ಮಾಡುತ್ತಾರೆಂದರೆ, ನಾವು ಎಳನೀರನ್ನು ಒಂದು ತುದಿಯಲ್ಲಿ ಕೊಚ್ಚಿ ತೂತು ಮಾಡುವ ಹಾಗೆ ಅಲ್ಲಿ ಬ್ಲೇಡ್‌ನಿಂದ ಒಂದು ತುದಿಯಲ್ಲಿ ಸಣ್ಣ ರಂಧ್ರ ಮಾಡುವುದರಿಂದ ಅಲ್ಲಿ ಚಿಟ್ಟೆ ಹೊರಕ್ಕೆ ಬರುತ್ತದೆ. ನಮ್ಮ ಗೂಡನ್ನು ಕೈಯಲ್ಲಿ ಇಟ್ಟುಕೊಂಡು ನೋಡಿದರೆ ಅದರ ಒಳಗೆ ಇರುವ ಚಿಟ್ಟೆಯ ಅಂಗಾಂಗವೆಲ್ಲಾ ಕಾಣುತ್ತದೆ. ಇದರಿಂದಲೇ ನಮ್ಮ ಹಾಗೂ ಅವರ ಗೂಡಿನಲ್ಲಿ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ನೋಡಬಹುದು. ಒಂದು ಅತಿ ಮುಖ್ಯವಾದಂತಹ ವಿಷಯವನ್ನು ನಮ್ಮ ತಜ್ಞರಿಗೆ, ನಮ್ಮ ನಿಪುಣರಿಗೆ, ನಮ್ಮ ಮೇಧಾವಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ರೇಷ್ಮೆ ಗೂಡಿನಲ್ಲಿ ಮೂರು ಪೊರೆಗಳು ಇರುತ್ತವೆ. ಅದರಲ್ಲಿ ಮೊದಲ ಮೇಲಿನ ಪದರದಲ್ಲಿ ಜೂಟ್ ಹಾಗೂ ಮಧ್ಯಮ ಪದರದಲ್ಲಿ ಪ್ಯೂರ್ ರೇಷ್ಮೆ ಹಾಗೂ ಕೊನೆಯ ಒಳ ಪದರದಲ್ಲಿ ಜೆಲ್ಲಿ ರೇಷ್ಮೆ ಇರುತ್ತದೆ. ಈ ೩ ಪದರಗಳ ಮಧ್ಯದಲ್ಲಿ ಇರುವ ಅಂಶವನ್ನು ಜಾಸ್ತಿ ಮಾಡಿ ಮೇಲೆ ಮತ್ತು ಒಳಗಿನ ಪದರವನ್ನು ಕಡಿಮೆ ಮಾಡುವ ವ್ಯವಸ್ಥೆ ಮಾಡಿ ಎಂದು ನಮ್ಮ ವಿಜ್ಞಾನಿಗಳಿಗೆ ಹೇಳುತ್ತಲೇ ಬಂದಿದ್ದೇನೆ. ಇದರ ಬಗ್ಗೆ ಯಾರೂ ಗಮನವನ್ನೇ ಕೊಟ್ಟಿಲ್ಲ. ನಮ್ಮ ರೈತರಿಗೆ ಇನ್ನೊಂದು ತೊಂದರೆ ಎಂದರೆ ಮಳೆಗಾಲದಲ್ಲಿ ರೇಷ್ಮೆ ಹುಳು ಹಣ್ಣಾಗಿದ್ದು ಗೂಡು ಕಟ್ಟಲು ಚಂದ್ರಿಕೆಯ ಮೇಲೆ ಬಿಟ್ಟಿರುತ್ತಾರೆ. ಆ ಸಮಯದಲ್ಲಿ ಮೋಡ ಬಂದ ಸಮಯದಲ್ಲಿ ಗೂಡುಕಟ್ಟುತ್ತಿರುವ ಹುಳುಗಳು ಮೂತ್ರವಿಸರ್ಜನೆ ಮಾಡಿಕೊಳ್ಳುತ್ತವೆ. ಅದು ಗೂಡಿಗೆ ಬಹಳ ಕೆಟ್ಟದ್ದು ಆಗುತ್ತದೆ. ಆ ನೀರಿನಿಂದಾಗಿ ಆ ಗೂಡಿನಲ್ಲಿ ನೂಲು ಬರುವುದಿಲ್ಲ ಹಾಗೂ ಆ ಗೂಡಿನ ಭಾರ ಕೂಡಾ ಹೆಚ್ಚಾಗುತ್ತದೆ. ಇದರಿಂದ ಮಾರುವವನಿಗೂ ನಷ್ಟ, ಕೊಳ್ಳುವವನಿಗೂ ನಷ್ಟ. ಈ ಸಮಯದಲ್ಲಿ ಹುಳು ಮೂತ್ರ ವಿಸರ್ಜನೆ ಮಾಡದಹಾಗೆ ನಮ್ಮ ತಜ್ಞರು ಒಳ್ಳೆಯ ತಳಿಗಳನ್ನು ಕಂಡುಹಿಡಿಯಬೇಕು. ಒಂದು ಪಕ್ಷ ವಿಸರ್ಜನೆ ಮಾಡಿದರೂ ಅದರಿಂದ ಗೂಡಿಗೆ ಯಾವರೀತಿಯ ಧಕ್ಕೆ ಆಗದತರಹ ಏನಾದರೂ ಕಂಡು ಹಿಡಿಯಬೇಕು. ಈ ಎಲ್ಲ ವಿಷಯಗಳ ಬಗ್ಗೆ ಹಂತ ಹಂತವಾಗಿ ಪ್ರಯೋಗಗಳನ್ನು ನಡೆಸುವುದರ ಮೂಲಕ ಒಳ್ಳೆಯ ಫಲ ಕಂಡು ಬಂದರೆ ನಮ್ಮ ರೇಷ್ಮೆ ಉದ್ಯಮಕ್ಕೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಈ ಬಗ್ಗೆ ಇಷ್ಟು ಹೇಳಿ ರೇಷ್ಮೆ ಮಾರಾಟ ಮಂಡಲಿ ಬಗ್ಗೆ ಬರುತ್ತೇನೆ. ರೇಷ್ಮೆ ಪ್ರಪಂಚದಲ್ಲಿ ರೇಷ್ಮೆ ವಿನಿಮಯ ಕೇಂದ್ರ ಹಾಗೂ ರೇಷ್ಮೆ ಮಾರಾಟ ಮಂಡಲಿ, ಗೂಡು ಮಾರುಕಟ್ಟೆಗಳು ಧೃವನಕ್ಷತ್ರ ಇದ್ದಂತೆ ಎಂದು ನಾನು ಮೊದಲೇ ಹೇಳಿದ್ದೇನೆ. ಆದರೆ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ಧೂಮಕೇತು ಇದ್ದಂತೆ. ಈ ಅಭಿಪ್ರಾಯ ನನಗೆ ಏಕೆ ಬಂತು ಎಂದು ಕೇಳಬಹುದು. ಆ ನಿಗಮದಲ್ಲಿ ಯಾರಿದ್ದಾರೆ, ಅಲ್ಲಿಯ ಮೇನೇಜಿಂಗ್ ಡೈರೆಕ್ಟರ್ ಯಾರು ಎಂದು ನನಗೆ ಗೊತ್ತಿಲ್ಲ. ಅಲ್ಲಿಯ ಅಧಿಕಾರಿ ವರ್ಗದವರ ಬಗ್ಗೆ ನನಗೆ ವೈಶಮ್ಯ ಇಲ್ಲ. ಆದರೆ ಅವರು ನಡೆಸತಕ್ಕ ಕಾರ್ಯ ವೈಖರಿಯನ್ನು ನೋಡಿ ನಾನು ಈ ಅಭಿಪ್ರಾಯಕ್ಕೆ ಬಂದಿದ್ದೇನೆಂದು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ ೪೯ ಗೂಡು ಮಾರುಕಟ್ಟೆಗಳು ಇವೆ. ಈ ೪೯ ಗೂಡು ಮಾರುಕಟ್ಟೆಗಳ ಮುಖಾಂತರ ೧೯೮೦-೮೭ರಲ್ಲಿ ಬಿಕರಿಯಾಗಿರತಕ್ಕ ಗೂಡು ೩೫.೪೦೦ ಮೆಟ್ರಿಕ್ ಟನ್. ಅದರಿಂದ ಗಳಿಸಿರತಕ್ಕ ಶುಲ್ಕ ೧೧೮ ಲಕ್ಷ. ೧೯೮೭-೮೮ರಲ್ಲಿ ೪೭,೪೯ ಮೆಟ್ರಿಕ್ ಟನ್ ರೇಷ್ಮೆ ಗೂಡು ಉತ್ಪತ್ತಿಯಾಗಿದ್ದರೆ, ಮಾರ್ಕೆಟ್ ಮುಖಾಂತರ ಮಾರಾಟವಾಗಿರತಕ್ಕದ್ದು ೪೦,೪೦೩ ಮೆಟ್ರಿಕ್ ಟನ್. ೭ ಸಾವಿರ ಮೆಟ್ರಿಕ್ ಟನ್ ರೇಷ್ಮೆಗೂಡು ಗುಳುಂ ಆಗಿದೆ. ಆದರಿಂದ ಬಂದಿರತಕ್ಕ ಶುಲ್ಕ ೪೨೮ ಲಕ್ಷ ರೂಪಾಯಿಗಳು. ಅದರ ಜೊತೆಗೆ ತಮಿಳುನಾಡು ಆಂಧ್ರ ಪ್ರದೇಶಗಳಿಂದ ರೇಷ್ಮೆ ಗೂಡು ಬಂದಿದೆ. ೭ ಸಾವಿರ ಮೆಟ್ರಿಕ್ ಟನ್ ರೇಷ್ಮೆಗೂಡು ಎಲ್ಲಿ ಹೋಯಿತು ? ಆದರಿಂದ ೭೧ ಲಕ್ಷ ರೂಪಾಯಿ ಕಮಿಷನ್ ಹೋಗಿದೆ. ಅದಕ್ಕಾಗಿ ಒಂದು ಸ್ಕ್ವಾಡ್ ಇದೆ. ನಾವೇ ಆಕ್ಟ್ ಮಾಡಿದ್ದೇವೆ. ಬೆಳೆದಿರತಕ್ಕ ರೇಷ್ಮೆಗೂಡು ಎಲ್ಲಾ ಮಾರ್ಕೆಟ್‌ಗೆ ಬರಬೇಕೆಂದೂ ಹಾಗೂ ಕಚ್ಚಾ ರೇಷ್ಮೆ ಸಹ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬರಬೇಕೆಂದು ಆಕ್ಟ್ ಮಾಡಿದ್ದೇವೆ. Karnataka Silkworm. Seed, Cocoon and Silk Yarn (Regulation of Production, Supply, Distribution and Sale) (Amendment) Act, 1987 ಎಂದು ಈ ಮನೆಯಲ್ಲಿ ನಾವೇ ಪಾಸ್ ಮಾಡಿದ್ದೇವೆ. ರೇಷ್ಮೆಗೂಡು ಹೊರಗಡೆ ಹೋಗಬಾರದು ಅದಕ್ಕಾಗಿ ಒಂದು ಸ್ಕ್ವಾಡ್ ಮಾಡಿ ಒಂದು ಶಾಖೆಯನ್ನು ಏರ್ಪಾಡು ಮಾಡಿದ್ದೇವೆ. ಅದು ಇದ್ದರೂ ೭ ಸಾವಿರ ಮೆಟ್ರಿಕ್ ಟನ್ ರೇಷ್ಮೆಗೂಡು ಬಂದಿಲ್ಲ ಅಂದರೆ ಅದು ಎಲ್ಲಿ ಹೋಯಿತು ? ಏಕೆಂದರೆ ಆದರಿಂದ ಸರ್ಕಾರಕ್ಕೆ ಬರಬೇಕಾದ ೭೧ ಲಕ್ಷ ಶುಲ್ಕ ಹೋಗಿದೆ, ಈ ತರಹ ವಿಚಿತ್ರವಾದದ್ದು ಬಹಳ ಇದೆ ಮುಂದೆ ಹೇಳುತ್ತೇನೆ. ನೀವು ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಇನ್ನೊಂದು ವಿಷಯ ಏನೆಂದರೆ ೧೯೮೭-೮೮ರಲ್ಲಿ ರಾಜ್ಯದಲ್ಲಿ ಉತ್ಪಾದನೆಯಾದ ರೇಷ್ಮೆ ೪,೯೭೧ ಮೆಟ್ರಿಕ್ ಟನ್. ರೇಷ್ಮೆ ವಿನಿಮಯ ಕೇಂದ್ರಕ್ಕೆ ಬಂದದ್ದು ಕೇವಲ ೨,೯೦೦ ಮೆಟ್ರಿಕ್, ಆದರಿಂದಾಗಿ ೬೦ ಪರ್ಸೆಂಟ್ ಬಂದ ಹಾಗೆ ಆಯಿತು. ಉಳಿದ ೪೦ ಪರ್ಸೆಂಟ್ ಹೊರಗಡೆ ಹೋಗಿದೆ. ರಾಮನಗರ ಒಂದರಲ್ಲೇ ದಿನವೊಂದಕ್ಕೆ ೩ ಸಾವಿರ ಕೆ. ಜಿ. ಉತ್ಪಾದನೆಯಾಗುತ್ತದೆ. ಚರಕ, ಫಿಲೇಚರ್ ರೇಷ್ಮೆ ಶೇಕಡ ೯೦ರಷ್ಟು ವರ್ತಕರಿಗೆ ಹೋಗುತ್ತದೆ. ಆದರಿಂದ ಎಷ್ಟು ಲಾಸ್ ಆಗುತ್ತದೆ ? ಮಾರ್ಕೆಟ್‌ನಲ್ಲಿ ಸ್ವಲ್ಪ ಬಿಗಿ ಇರಬೇಕು. ವರ್ತಕರಿಗೆ ರೇಷ್ಮೆ ಹೋದಾಗ ಬೆಲೆ ಜಾಸ್ತಿಯಾಗುತ್ತದೆ. ಪ್ರೈಸ್ ಅನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಬೆಳೆಯತಕ್ಕ ರೇಷ್ಮೆ ಪೂರ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬರಬೇಕು. ಪೂರ ಮಾರ್ಕೆಟ್‌ಗೆ ಬರಬೇಕು. ಇವತ್ತಿನ ದಿವಸ ಬೇಕಾದಷ್ಟು ನಷ್ಟವಾಗುತ್ತಿದೆ. ರೇಷ್ಮೆಗೂಡಿನಿಂದ ಒಂದು ಮುಕ್ಕಾಲು ಕೋಟಿ ನಷ್ಟವಾಗಿದೆ ನಮಗೆ ಬರಬೇಕಾದ ಶುಲ್ಕ ತಪ್ಪಿ ಹೋಗಿದೆ. ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಹಾಗೂ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಆಡಳಿತ ವೈಖರಿಯ ಬಗ್ಗೆ ವಿಷಾದದಿಂದ ಪಶ್ಚಾತ್ತಾಪದಿಂದ ನಾನು ರೈತನಾಗಿ ನೊಂದು ಹೇಳುತ್ತಿದ್ದೇನೆ. ದಯ ಮಾಡಿ ಒಂದು ಮುಕ್ಕಾಲು ಕೋಟಿ ೨ ಕೋಟಿ ರೂಪಾಯಿಗಳ ಲಾಸ್ ಏನು ಆಗಿದೆ ಅದನ್ನು ಸ್ವಲ್ಪ ಬಿಗಿ ವಹಿಸಿದರೆ ಅವನ್ನು ಉಳಿಸಲಿಕ್ಕೆ ಸಾಧ್ಯವೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ರೇಷ್ಮೆ ವಿನಿಮಯ ಕೇಂದ್ರದ ಬಗ್ಗೆ ಮಾನ್ಯ ವೆಂಕಟರಾಮಯ್ಯನವರು ಪ್ರಶ್ನೆ ಕೇಳಿದ್ದರು, ಆಗ ನಾನು ಮಾತನಾಡಲಿಲ್ಲ. ನಿಜವಾಗಿ ಉತ್ಪಾದನೆ ಮಾಡಿದ ಒಳ್ಳೆಯ ಗುಣಮಟ್ಟ ಇರತಕ್ಕ ರೇಷ್ಮೆಗೆ ಒಳ್ಳೆಯ ಬೆಲೆ ಕೊಡುತ್ತಿಲ್ಲ. ರೇಷ್ಮೆ ವಿನಿಮಯ ಕೇಂದ್ರದಲ್ಲಿ ರೇಷ್ಮೆಯನ್ನು ಹರಾಜು ಹಾಕಿದಾಗ ಕೊಂಡುಕೊಳ್ಳುವವರು ಕೊಂಡು ಕೊಳ್ಳಬೇಕು. ಕೊಡುವವರು. ತಗೆದು ಕೊಳ್ಳುವವರು ಒಳ ವ್ಯಾಪಾರ ಮಾಡಿಕೊಂಡು ಗೂಡು ಮಾರ್ಕೆಟ್‌ಗೆ ಬಂದ ತಕ್ಷಣ ಮೊದಲೇ ವ್ಯಾಪಾರ ಮಾಡಿಕೊಳ್ಳುತ್ತಾರೆ. ಸರ್ಕಾರಕ್ಕೆ ಬರತಕ್ಕ ಶುಲ್ಕವನ್ನು ಕಡಿಮೆ ಮಾಡುತ್ತಾರೆ. ಒಳ್ಳೆಯ ರೇಷ್ಮೆ ವ್ಯಾಪಾರಸ್ಥರ ಕೈಗೆ ಹೋಗುತ್ತದೆ, ಕಳಪೆ ರೇಷ್ಮೆ ಮಾರ್ಕೆಟ್‌ಗೆ ಬರುತ್ತದೆ ಇದನ್ನು ಮೊದಲು ತಪ್ಪಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಏನು ಮಾಡಬೇಕು ಹೇಳಿ ನೋಡೋಣ.

ಶ್ರೀ ಜಿ. ರಾಜುಗೌಡ.— ಬಿಗಿ ಮಾಡಬೇಕು. ಅಧಿಕಾರಿಗಳು ಆದಷ್ಟು ಪ್ರಾಮಾಣಿಕವಾಗಿ ನಡೆದರೆ ಸರಿಯಾಗುತ್ತದೆ. ಎಲ್ಲವನ್ನು ಇಲ್ಲಿ ಬಿಚ್ಚಿ ಹೇಳುವುದಕ್ಕಾಗುವುದಿಲ್ಲ. ಸದನದ ಸಮಿತಿಯನ್ನು

ಮಾಡಿ, ಅಲ್ಲಿ ಎಲ್ಲವನ್ನೂ ಹೇಳುತ್ತೇನೆ. ಇಲ್ಲಿ ಹೇಳುವುದು ಸೂಕ್ತವಲ್ಲ, ಹೇಳಿದರೆ ಚೆನ್ನಾಗಿ ಇರುವುದಿಲ್ಲ. ಕೆಲವು ವರ್ತಕರ ವಿಶ್ವಾಸಕ್ಕನುಗುಣವಾಗಿ ನಡೆಯತಕ್ಕ ಅಧಿಕಾರಿಗಳು ಕೆಲವರು ಇದ್ದಾರೆ. ಒಳ್ಳೆಯ ರೇಷ್ಮೆ ಮಾರ್ಕೆಟ್‌ಗೆ ಬಂದರೆ ಇಂತಹ ಒಳ್ಳೆಯ ರೇಷ್ಮೆ ಬಂದಿದೆಯೆಂದು ಫೋನ್ ಮಾಡುತ್ತಾರೆ, ಆಗ ವ್ಯಾಪಾರಗಾರರು ಬರುತ್ತಾರೆ ಕೊಂಡುಕೊಳ್ಳುತ್ತಾರೆ. ಕಳಪೆ ರೇಷ್ಮೆ ಮಾತ್ರ ಮಾರ್ಕೆಟ್‌ನಲ್ಲಿ ಉಳಿದು ಕೊಳ್ಳುತ್ತದೆ. ಇದನ್ನು ತಪ್ಪಿಸುವಂತಹ ಕೆಲಸವನ್ನು ಮಾಡಬೇಕು. ಮತ್ತು ಉತ್ತಮ ಗುಣ ಮಟ್ಟದ ರೇಷ್ಮೆಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಒಳ್ಳೆಯದರವನ್ನು ತಾವು ನಿಗದಿ ಮಾಡಬೇಕು. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಮೊದಲು ೪೫೦ ರಿಂದ ೫೦೦ ಮಂದಿ ಗ್ರಾಹಕರು ರೇಷ್ಮೆ ವಿನಿಮಯ ಕೇಂದ್ರಕ್ಕೆ ಬರುತ್ತಿದ್ದರು. ಈಗ ಅವರು ಬರುತ್ತಾ ಇಲ್ಲ. ಚಾಮುಂಡೇಶ್ವರಿ ಸಿಲ್ಕ್ಸ್ ಅವರಿಗೆ ತಿಂಗಳಿಗೆ ಮೂರು ಸಾವಿರ ಕೇಜಿ ರೇಷ್ಮೆ ಬೇಕು ಈಗ ಅವರು ಮರ್ಚೆಂಟ್ಸ್ ಹತ್ತಿರ ಹೋಗುತ್ತಿದ್ದಾರೆ. ಇಲ್ಲಿಗೆ ಬರುತ್ತಿಲ್ಲ. ಬೆಂಗಳೂರಿನಲ್ಲಿ ಇರತಕ್ಕ ಬಿನ್ನಿಮಿಲ್ಸ್‌ನವರಿಗೆ ಸುಮಾರು ಐದು ಸಾವಿರ ಕೆ.ಜಿ. ರೇಷ್ಮೆ ಬೇಕು ಸ್ವಾಮಿ ಅವರು ಕೂಡ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬರುತ್ತಿಲ್ಲ. ಅವರೂ ಸಹ ಮರ್ಚೆಂಟ್ಸ್ ಕಡೆಗೆ ಹೋಗುತ್ತಿದ್ದಾರೆ. ಅಲ್ಲಿಯೇ ತೆಗೆದುಕೊಳ್ಳುತ್ತಿದ್ದಾರೆ. ತಾವು ಪ್ರತಿಯೊಂದು ರೇಷ್ಮೆ ಕೂಡ ಈ ರೇಷ್ಮೆ ವಿನಿಮಯ ಕೇಂದ್ರದ ಮುಖಾಂತರವೇ ಬರಬೇಕೆಂದು ಮಾಡಿದಾಗ ಎಲ್ಲರೂ ಇಲ್ಲಿಗೇ ಬರುತ್ತಾರೆ ಅವರಿಗೆ ಬೇಕಾದಷ್ಟು ರೇಷ್ಮೆ ಸಿಗುತ್ತದೆ. ಮುಖ್ಯವಾಗಿ ನಮ್ಮ ಸ್ಕ್ವಾಡ್‌ನವರು ಸರಿಯಾಗಿ ಕೆಲಸ ಮಾಡಿಲ್ಲ. ಈ ರೇಷ್ಮೆ ಬೇಕಾದಷ್ಟು ಹೊರಗೆ ಹೋದಾಗ ಇಲ್ಲಿ ಅದು ಸಿಗುವುದಿಲ್ಲವೆಂದುಕೊಂಡು ಮತ್ತೆ ಅವರು ಕೋರಿಗಳವರ ಹತ್ತಿರ ಹೋಗಿ ಅವರ ಹತ್ತಿರವೇ ವ್ಯಾಪಾರ ಮಾಡುತ್ತಾರೆ. ದಯಮಾಡಿ ಅದೇನು ಲೂಪ್ಸ್‌ಹೋಲ್ಸ್ ಇವೆ, ಅದನ್ನು ತಪ್ಪಿಸಲಿಕ್ಕೆ ತಾವು ವ್ಯವಸ್ಥೆ ಮಾಡಬೇಕೆಂದು ನಾನು ಹೇಳುವುದಕೆ ಇಚ್ಛೆಪಡುತ್ತೇನೆ.

(ಮಾನ್ಯ ಅಧ್ಯಕ್ಷರು ತಮ್ಮ ಸ್ಥಾನವನ್ನು ಅಲಂಕರಿಸಿದರು)

ಮತ್ತೆ ರೇಷ್ಮೆ ಮಾರಾಟ ಮಹಾ ಮಂಡಳಿ–ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಅಂತ ಇದೆ. ಯಾವ ಉದ್ದೇಶಕ್ಕಾಗಿ ಅದು ಸ್ಥಾಪಿತವಾಯಿತೋ ಅದನ್ನು ಪೂರ್ಣವಾಗಿ ನೆರವೇರಿಸಲಿಕ್ಕೆ ಸಾಧ್ಯವಾಗಿಲ್ಲ. ಅದರ ಬಂಡವಾಳ ೧೧ ಕೋಟಿ. ನೀವು ಕೊಟ್ಟಿರತಕ್ಕಂಥಾದ್ದು ೬೦ ಲಕ್ಷ. ಹೀಗಾದರೆ ಬೆಲೆ ನಿಯಂತ್ರಣ ಮಾಡಬೇಕೆಂದರೆ ಹೇಗೆ ಸಾಧ್ಯ ಸ್ವಾಮಿ ? ಕೊಟ್ಟಿರತಕ್ಕಂಥ ಒಂದು ಗೂಳಿಯನ್ನು ಒಂದು ಸಣ್ಣ ಜನಿವಾರದಿಂದ ಕಟ್ಟಲಿಕ್ಕಾಗುತ್ತದೆಯೇ ? ಸ್ವಲ್ಪ ದಯಮಾಡಿ ಹೇಳಿ ತಾವು. ಏತಕ್ಕೋಸ್ಕರ ಇದನ್ನು ಸ್ಥಾಪನೆ ಮಾಡಿದ್ದೀರಿ ? ಜಪಾನ್‌ನಲ್ಲಿ ಬೆಲೆ ಯಾವುದೇ ಸಂದರ್ಭದಲ್ಲೂ ಶೇಕಡಾ ಹತ್ತರಷ್ಟು ಜಾಸ್ತಿಯೂ ಆಗುವುದಿಲ್ಲ, ಕಡಿಮೆಯೂ ಆಗುವುದಿಲ್ಲ. ನಮ್ಮಲ್ಲಿ ಇದ್ದಕ್ಕಿದ್ದಂತೆ ಧಾರಣೆ ೫೦ ಪರ್ಸೆಂಟ್ ಜಾಸ್ತಿಯಾಗುತ್ತದೆ, ಇದ್ದಕ್ಕಿದ್ದಂತೆ ೫೦ ಪರ್ಸೆಂಟ್ ಕಡಿಮೆಯಾಗುತ್ತದೆ. ಇದನ್ನು ತಪ್ಪಿಸುವ ಉದ್ದೇಶದಿಂದ ರೇಷ್ಮೆ ವಿನಿಮಯ ಕೇಂದ್ರಕ್ಕೆ ಎಷ್ಟು ರೇಷ್ಮೆ ಬರುತ್ತದೋ ಅದರಲ್ಲಿ ಕೊನೆಯ ಪಕ್ಷ ಶೇಕಡಾ ೫೦ರಷ್ಟಾದರೂ ದಾಸ್ತಾನು ಮಾಡಬೇಕೆಂಬ ಉದ್ದೇಶದಿಂದ ಈ ಒಂದು ಮಾರಾಟ ಮಹಾ ಮಂಡಳಿಯನ್ನು ಮಾಡಿದ್ದೀರಿ. ಆದರೆ ತಾವು ದುಡ್ಡು ಕೊಡಲಿಲ್ಲ ನಮ್ಮಲ್ಲಿ ೨೯ ಕೋಟಿ ರೂಪಾಯಿ ಇದೆ. Price Stabilisation Fund ಏನಿದೆ, ಅದು ನಮ್ಮ ದುಡ್ಡು. ನೀವು ಅದನ್ನು ಕೂಡ ಕೊಡಲಿಲ್ಲ. ಕೇವಲ ೬೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ಆಮೇಲೆ ಅತ್ತು ಕರೆದು ೧ ಕೋಟಿ ಸಾಲ ಕೇಳಿದ್ದಕ್ಕೆ ಬಂತು. ತಾವು ಕೊಟ್ಟಿದ್ದೆಷ್ಟು? ಸರ್ಕಾರಿ ಆಜ್ಞೆ ಯಾವಾಗ ಯಾವ ತಾರೀಕಿನಲ್ಲಿ ಆಯಿತು ಅಂತ ಹೇಳುತ್ತೇನೆ ನಾನು. ಆ ಆಜ್ಞೆಗೆ ಏನು ಬೆಲೆ ಬಂತು ? ನಿಮ್ಮ ಆಜ್ಞೆಗೆ ಬೆಲೆ ಇಲ್ಲ ಅಂದ ಮೇಲೆ ನಾನು ಅಳಬೇಕೋ. ನಗಬೇಕೋ ಹೇಳಿ ! ದಯ ಮಾಡಿ ತಾವು ಈ ಒಂದು ಉದ್ಯಮವನ್ನು ಒಳ್ಳೆ ರೀತಿಯಲ್ಲಿ ಬೆಳೆಸಬೇಕೆಂದು ಹೇಳಿದಾಗ ಅದನ್ನು ದಪ್ಪಪುಷ್ಟವಾಗಿ ಮಾಡುವಂಥ ಕೆಲಸ ಮಾಡಿ. ಒಂದು ವರ್ಷದಲ್ಲಿ ಏನು ವಹಿವಾಟು ಮಾಡಿದೆ ಎಂದು ದಯ ಮಾಡಿ ನೋಡಿ. ೧೯೮೭–೮೮ರಲ್ಲಿ ೧೫೮.೩೯ ಕೋಟಿ ರೂಪಾಯಿಗಳಷ್ಟು ರೇಷ್ಮೆ ಮಾರಾಟ ಆಗಿದೆ. ಇಷ್ಟು ನಡೆದಿರುವಾಗ ತಾವು ವಹಿವಾಟನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾದರೆ ಕೊನೆಯ ಪಕ್ಷ ಒಂದು ತಿಂಗಳಿನ ವಹಿವಾಟಿನ ಬಂಡವಾಳ ಬರಬೇಕಾದರೆ ಸುಮಾರು ೧೫ ಕೋಟಿ ಕೊಡಬೇಕಾಗುತ್ತದೆ. ಇದನ್ನು ಕೊಟ್ಟಾಗ ರೇಷ್ಮೆ ಬೆಲೆ ಜಾಸ್ತಿ ಬಂದಾಗ ಅದನ್ನು ತೆಗೆದು

ಬಫರ್ ಸ್ಟಾಕ್ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ರೇಷ್ಮೆ ಬೆಲೆ ಕಡಿಮೆಯಾದಾಗ ಹೆಚ್ಚು ಬಿಡಲಿಕ್ಕೆ ಅನುಕೂಲ ಆಗುತ್ತದೆ. ಆರೀತಿ ಒಂದು ಸುಸ್ಥಿತವಾದ ಭದ್ರ ಬುನಾದಿಯನ್ನು ಇಟ್ಟುಕೊಳ್ಳದೆ ಅದನ್ನು ಅಸ್ಥಿರಗೊಳಿಸಿದರೆ ಎಲ್ಲಿ ಸ್ವಾಮಿ ಬೆಲೆಯನ್ನು ನಿಯಂತ್ರಣ ಮಾಡಲಿಕ್ಕೆ ಸಾಧ್ಯವಾಗುತ್ತದೆ ?

ತಾವು ಈ ಇಲಾಖೆಯನ್ನು ವಹಿಸಿಕೊಂಡಿದ್ದು ಬಹಳ ಸಂತೋಷ. ತಾವು ಇದನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೀರಿ. ಬಹುಶಃ ಈ ಮಾರಾಟ ಮಹಾ ಮಂಡಳಿಯನ್ನು ಒಂದು ಭದ್ರವಾದ ಬುನಾದಿಯ ಮೇಲೆ ನಡೆಸಿ. ನಮ್ಮಲ್ಲೇ ಆದ ೨೮ ಕೋಟಿ ರೂಪಾಯಿಗಳು ಇದೆ. ನೀವು ಕೈಯಿಂದ ದುಡ್ಡು ಹಾಕಬೇಕಾಗಿಲ್ಲ. ನಮ್ಮ ದುಡ್ಡನ್ನು ಕೊಟ್ಟು ರೈತರಿಗೆ ಒಳ್ಳೆಯದನ್ನು ಮಾಡಿ. ಆದರೆ ಪ್ರಾಕ್ಟೀಸ್ ಮಾಡುವವರು ಕೂಡ ಈ ನಿಧಿಯನ್ನು ಅದಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂಬ ಕಾನೂನನ್ನು ಮೀರಿದಿರಿ. ಇದು ಮಿಸ್ ಅಪ್ರೋಪ್ರಿಯೇಶನ್ ಫಂಡ್ ಅಂತ ಹೇಳಲೋ, ಏನು ಅಂತ ಹೇಳಲೋ ನನಗೇ ಗೊತ್ತಿಲ್ಲ. ದಯವಿಟ್ಟು ತಾವು ಬಂದ ಮೇಲೆ ಆದರೂ ಈ ಇಲಾಖೆಯನ್ನು ಪುಷ್ಟಿಗೊಳಿಸಲಿಕ್ಕೆ ಈ ದುಡ್ಡನ್ನು ಅದಕ್ಕಾಗಿ ಉಪಯೋಗಿಸಬೇಕು ಎಂದು ಹೇಳಿ ತಮ್ಮನ್ನು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ನೋಡಿ ಸ್ವಾಮಿ ಆರ್ಡರ್ ನಂ. ಸಿಐ ೨೨ ಎಸ್‌ಎಂಬಿ ೮೪ ದಿನಾಂಕ ೨-೧೨-೮೩ರ ಪ್ರಕಾರ ಕೊಟ್ಟಿದ್ದು ೨೫ ಲಕ್ಷ ರೂ.ಗಳು. ಇಷ್ಟು ಮಾತ್ರ ಬಿಡುಗಡೆ ಮಾಡಿದ್ದೀರಿ. ಆಮೇಲೆ ಕೈಕಟ್ಟಿ ಕುಳಿತುಬಿಟ್ಟಿರಿ. ಮತ್ತೆ ಏನು ಮಾಡಲಿಕ್ಕೆ ಆಗಲಿಲ್ಲ. ಆದ್ದರಿಂದ ರೇಷ್ಮೆಯನ್ನು ಕೊಂಡುಕೊಳ್ಳಕ್ಕೆ ಆಗಲಿಲ್ಲ. ಆ ರೇಷ್ಮೆ ಮಾರುಕಟ್ಟೆ ಮಹಾ ಮಂಡಲಿ ಸ್ಥಾಪನೆಯಾದ ಮೇಲೆ ಏನು ಆಗಿದೆ ಎಂಬುದರ ಬಗ್ಗೆ ತಮ್ಮ ಗಮನವನ್ನು ನಾನು ಸೆಳೆಯುತ್ತಿದ್ದೇನೆ.

೧೯೮೦-೮೧ರಲ್ಲಿ ಮಾರುಕಟ್ಟೆಗೆ ಬಂದಿದ್ದು ೧೬೩೦ ಟನ್. ಇದರಲ್ಲಿ ಸಿಲ್ಕ್ ಎಕ್ಸ್‌ಚೇಂಜ್‌ಗೆ ಬಂದಿರತಕ್ಕಂಥಾದ್ದು ೧೮೦ ಟನ್, ಅಂದರೆ ಶೇಕಡ ೧೨ರಷ್ಟು ಮಾತ್ರ ಕೊಂಡಿದ್ದಾರೆ. ೧೯೮೧-೮೨ರಲ್ಲಿ ೨೪೯೮ ಟನ್ ಬಂದಿದ್ದು, ೩೨೩ ಟನ್ ತೆಗೆದುಕೊಂಡಿದ್ದು ಶೇಕಡ ೧೩ ಪರ್ಸೆಂಟ್. ೧೯೮೨-೮೩ರಲ್ಲಿ ೨೬೨೩ ಟನ್ ಬಂದಿದ್ದು, ೩೨೦ ಟನ್ ಮಾತ್ರ ತೆಗೆದುಕೊಂಡಿದ್ದಾರೆ. ಅಂದರೆ ಶೇಕಡ ೧೪ ಪರ್ಸೆಂಟ್. ಇದೇ ರೀತಿ ೧೯೮೭-೮೮ರಲ್ಲಿ ೨೯೨೩ ಟನ್ ಬಂದಿದ್ದು. ತೆಗೆದುಕೊಂಡಿದ್ದು ೩೮೦ ಟನ್ ಅಂದರೆ ಶೇಕಡ ೧೨.೯ ಪರ್ಸೆಂಟ್. ಅಂದರೆ ಯಾವ ವರ್ಷವೂ ಸರಾಸರಿ ೧೩ ಪರ್ಸೆಂಟ್ ಮೇಲೆ ಕೊಂಡಿಲ್ಲ, ದಯವಿಟ್ಟು ಸುಮ್ಮನೆ ಅವರ ಮೇಲೆ ಅಪಪ್ರಚಾರ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ದಯಮಾಡಿ ಸಿಲ್ಕ್ ಎಕ್ಸ್‌ಚೇಂಜ್‌ಗೆ ಸಾಕಷ್ಟು ಬಂಡವಾಳವನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಣವನ್ನು ತಕ್ಷಣ ಬಿಡುಗಡೆ ಮಾಡಿದರೆ ಅನುಕೂಲವಾಗುತ್ತದೆ. ಸ್ವಾಮಿ, ಈ ರೇಷ್ಮೆ ಮಾರಾಟ ಮಂಡಲಿಯ ಮೇಲೆ ಬಂದಿರತಕ್ಕ ದೂರು ಏನೆಂದರೆ, ಮಾಲು ಹೆಚ್ಚು ಬಂದಾಗ ಬಫರ್ ಸ್ಟಾಕ್ ಮಾಡಿಕೊಳ್ಳುವುದಿಲ್ಲ ಎನ್ನುವುದು ಹಾಗೂ ಗ್ರಾಹಕರ ಬೇಡಿಕೆಯನ್ನು ಸಕಾಲದಲ್ಲಿ ಪೂರೈಸುವುದಕ್ಕಾಗಲಿಲ್ಲ ಎನ್ನುವುದು, ಒಳ್ಳೆಯ ಗುಣಮಟ್ಟದ ರೇಷ್ಮೆಯನ್ನು ವ್ಯಾಪಾರಸ್ಥರಿಗೆ ಬಿಟ್ಟುಕೊಡುವುದು, ಕಳಪೆ ರೇಷ್ಮೆಯನ್ನು ಮಂಡಲಿಯವರು ತೆಗೆದುಕೊಳ್ಳುವುದು, ಒಂದು ದಿನದಲ್ಲಿ ನಮ್ಮ ರಾಜ್ಯದಲ್ಲಿ ಈ ರೇಷ್ಮೆಯ ಉತ್ಪತ್ತಿ, ಹದಿಮೂರುವರೆ ಟನ್ ಆಗುತ್ತದೆ. ಆದರೆ ರೇಷ್ಮೆ ಮಂಡಲಿಗೆ ಬರತಕ್ಕಂತಾದ್ದು ಶೇಕಡ ೪೦ರಿಂದ ೫೦ ಭಾಗ. ಇದನ್ನು ತಾವು ಬಿಗಿ ಮಾಡಬೇಕು, ಇದು ನಮಗೆ ಬಹಳ ಮುಖ್ಯ. ಆಮೇಲೆ ರೇಷ್ಮೆ ವಿನಿಮಯ ಕೇಂದ್ರದವರು ತಮ್ಮಲ್ಲಿ ದಾಸ್ತಾನು ಮಾಡುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಆದರೂ ಕೂಡ ಹೊರಗಡೆ ೫ ಗೋಡೌನ್‌ಗಳನ್ನು ಬಾಡಿಗೆಗೆ ತೆಗೆದುಕೊಂಡರು, ಇದಕ್ಕೆ ೪ ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟರು. ಇದು ತಮ್ಮ ಗಮನಕ್ಕೆ ಬಂದಿಲ್ಲ. ಇದು ೬೪೮೦ ಚದರ ಅಡಿ ಇರತಕ್ಕಂಥ ಗೋಡೌನ್. ಚದರ ಅಡಿಗೆ ೪ ರೂಪಾಯಿ ೭೦ ಪೈಸೆಯಂತೆ ತೆಗೆದುಕೊಂಡರು ತಮ್ಮ ಹತ್ತಿರ ೫ ಗೋಡೌನ್ ಖಾಲಿ ಇವೆ, ಆದರೂ ಕೂಡ ಇದನ್ನು ಬಾಡಿಗೆಗೆ ತೆಗೆದುಕೊಂಡು ೪ ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟರು. ನಾನು ಈ ವಿಷಯದ ಬಗ್ಗೆ ಈ ಮನೆಯಲ್ಲಿ ಪ್ರಶ್ನೆ ಹಾಕಿದಾಗ, ತಕ್ಷಣ ಆ ಗೋಡೌನ್ ಖಾಲಿ ಮಾಡಿದರು. ಆದರೆ ಅಡ್ವಾನ್ಸ್ ನಮಗೆ ಇನ್ನೂ ಬರಬೇಕು ಇನ್ನೂ ವಸೂಲ್ಮಾಡಿಲ್ಲವೆಂದು ಅನಿಸುತ್ತದೆ. ದಯಮಾಡಿ ಇದರ ಬಗ್ಗೆ ತಾವು ಹೇಳಬೇಕು. ಇನ್ನು ಫ್ಯಾಬ್ರಿಕ್ಸ್ ಎಂದು ಸಿದ್ಧಪಡಿಸಿರತಕ್ಕಂಥ ಉಡುಪು. ಇದರ ಗತಿ ಏನಾಗಿದೆ ಎಂದರೆ, ರೇಷ್ಮೆ ಮಾರಾಟ ಮಂಡಲಿಯಲ್ಲಿ ತಯಾರು ಮಾಡಿ ೪ ವರ್ಷವಾಗಿದೆ. ಇವತ್ತಿನ ದಿವಸ ಅದು ಬಿಕರಿಗೆ

ಅನರ್ಹವಾಗಿದೆ. ನಾವು ೨೫ ಲಕ್ಷ ರೂ. ಗಳ ಬಂಡವಾಳ ಹಾಕಿದ್ದೇವೆ. ಈ ವಿಷಯದಲ್ಲಿ ಮಾತ್ರ ತಾವು ಹೊಳಹೊಕ್ಕು ನೋಡಬೇಕು. ಒಂದು ಮೀಟರಿಗೆ ೨ ರೂಪಾಯಿ ಕಮಿಷನ್ ಹೊಡೆದಿದ್ದಾರೆ, ಅವರು ಯಾರು ಎಂದರೆ ಅಸಿಸ್ಟೆಂಟ್ ಮಾರ್ಕೆಟಿಂಗ್ ಆಫೀಸರ್, ಸಿಲ್ಕ್ ಅಸಿಸ್ಟೆಂಟ್, ಮತ್ತು ಆಗ ಇದ್ದಂಥ ಎಂ.ಡಿ. ಇವರೆಲ್ಲರೂ ಇದಕ್ಕೆ ಪಾಲುದಾರರು. ಈ ಬಟ್ಟೆಯನ್ನು ಎಲ್ಲಿ ಮಾಡುತ್ತಾರೆಂದರೆ, ಈರೋಡು ಮತ್ತು ಕೊಯಮತ್ತೂರು. ಅಲ್ಲಿಗೆ ನಮ್ಮ ರೇಷ್ಮೆಯನ್ನೇ ಕೊಟ್ಟು, ಬಟ್ಟೆಯನ್ನು ಸಿದ್ಧಪಡಿಸಿರುವುದು ಇದಕ್ಕೆ ದಳ್ಳಾಳಿ, ವೆಂಕಟೇಶ್ವರ ಸಿಲ್ಕ್, ಕೊಯಮತ್ತೂರು ಇವರ ಮುಖಾಂತರ ಕೊಟ್ಟು ಮಾಡಿದ್ದಾರೆ. ಇದರ ಜೊತೆಗೆ ನೂಲಿನ ದಾರವನ್ನೂ ರೇಷ್ಮೆ ಬಟ್ಟೆಗೆ ಸೇರಿಸಿದ್ದಾರೆ, ತಾವು ದಯಮಾಡಿ ಪರೀಕ್ಷೆ ಮಾಡಿಸಬೇಕು. ಈ ರೀತಿ ಮಾಡಿರುವುದರಿಂದ ಅದು ಬಿಕರಿಗೆ ಅನರ್ಹವಾಗಿದೆ. ಮತ್ತೆ ಸ್ಟಾಕ್ ಕೂಡ ಸರಿಯಾಗಿ ಇಟ್ಟಿಲ್ಲ, ಯದ್ವಾತದ್ವಾ ಇಟ್ಟಿದ್ದಾರೆ. ಇದರಿಂದ ಇನ್ನೆಷ್ಟು ನಷ್ಟವಾಗುತ್ತದೆಂದರೆ, ಅನ್‌ಯೂಸ್‌ನೆಸ್ ಜಾಸ್ತಿ ಇದೆ, ದಪ್ಪಸಣ್ಣ ಇದೆ, ಬಣ್ಣದ ಜೋಡಣೆ ಸರಿ ಇಲ್ಲ, ಹಳೇ ಪ್ರಿಂಟ್. ಇದರಿಂದ ಸುಮಾರು ೧೬–೧೭ ಲಕ್ಷ ರೂಪಾಯಿಗಳು ನಮಗೆ ಬರಬೇಕು. ಮಾರಾಟ ಮಂಡಳಿಯನ್ನು ೧೯೭೬ರ ಜನವರಿಯಲ್ಲಿ ಮುಚ್ಚಿದರೂ ಸಹ ಅಲ್ಲಿಯವರೆಗೆ ಹನ್ನೊಂದು ಮುಕ್ಕಾಲು ಲಕ್ಷ ಮಾತ್ರ ಮಾರಾಟ ಮಾಡಿದ್ದು. ೩೧–೩–೧೯೭೭ಕ್ಕೆ ಬಟ್ಟೆ ದಾಸ್ತಾನು ಮೌಲ್ಯ ೧೬.೩೨ ಲಕ್ಷ ರೂಪಾಯಿಗಳು, ಇದನ್ನು ಹಾಳು ಮಾಡಿದ್ದಾರೆ. ಈ ರೀತಿ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಈಗ ಬಡ ನೇಕಾರರು ಎಂದು ಇದ್ದಾರೆ, ಇವರಿಗಾಗಿ ಬಡ ನೇಕಾರರ ಬಂಧು ಎಂದು ಒಂದು ಯೋಜನೆ ಮಾಡಿದ್ದಾರೆ, ಇದು ನಿಮ್ಮ ವರದಿಯಲ್ಲಿ ಇಲ್ಲ. ನನ್ನ ಅಭಿಪ್ರಾಯ ಏನೆಂದರೆ, ಇವರಿಗೆ ಹಸಿರು ಕಾರ್ಡ್ ಕೊಡಬೇಕು. ಒಂದು ತಿಂಗಳಿಗೆ ಬೇಕಾಗಿರತಕ್ಕ ರೇಷ್ಮೆಯನ್ನು ಸಾಲವಾಗಿ ಕೊಟ್ಟು, ಅವರು ಸಿದ್ಧಪಡಿಸುವ ಉಡುಪುಗಳನ್ನು ತಾವು ಕೊಂಡುಕೊಂಡು, ಹೊರ ರಾಜ್ಯದಲ್ಲಿ ಏಕೆ ಮಾರಿದ್ದೀರಿ ? ಈ ರೀತಿ ಏಕೆ ಮಾಡಿದರು. ಇದರ ಒಳಗೆ ತಾವು ಒಳಹೊಕ್ಕು ನೋಡಬೇಕು. ಇದರ ಬಗ್ಗೆ ಅಧ್ಯಯನ ಮಾಡಿ. ಸತ್ಯವನ್ನು ಕಂಡುಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ರೇಷ್ಮೆ ಮಂಡಲಿಯು ೧೨.೧೮ ಲಕ್ಷ ರೂಪಾಯಿಗಳ ಲಾಭ ಗಳಿಸಿದೆ. ೧೯೭೦–೭೧ರಿಂದ ೧೯೭೬–೭೭ರ ವರೆಗೆ ಆಗಿರತಕ್ಕಂಥ ಲಾಭನಷ್ಟ ನೋಡಿದಾಗ ೧೨.೧೮ ಲಕ್ಷ ಲಾಭ ಗಳಿಸಿದೆ. ಈ ವರ್ಷ ಅಂದರೆ ಪ್ರಾವಿಷನಲ್ ಲಾಭನಷ್ಟ ೧೯೭೭–೭೮ರಲ್ಲಿ ೬೨.೪೩ ಲಕ್ಷ. ಇದು ಯಾರಿಗೆ ಬರಬೇಕು. ಡಿಸೆಂಬರ್‌ನಲ್ಲಿ ಯದ್ವಾತದ್ವಾ ಬೆಲೆ ಬಂತು. ಈಗ ಒಂದು ಉದಾಹರಣೆ, ಯಾವನೋ ಒಬ್ಬ ಡಾಕ್ಟರು ಇದ್ದ. ಅವನು ವೃತ್ತಿ ಆರಂಭ ಮಾಡಿದಂದಿನಿಂದ ಮೂರುಕಾಸು ಸಿಗಲಿಲ್ಲ, ಅವನು ಇರತಕ್ಕ ಪರಿಸರದಲ್ಲಿ, ಸುತ್ತಮುತ್ತ, ಕಾಲರ ಜಾಸ್ತಿಯಾಯಿತು. ಒಂದೇ ಸಾರಿ ೭–೮ ಲಕ್ಷ ರೂಪಾಯಿ ಲಾಭ ಬಂತು. ಆ ತರಹ ಇಲ್ಲಿ ಆಗಿಬಿಟ್ಟಿತು.

೫–೦೦ ಪಿ.ಎಂ.

೬೨.೪೩ ಲಕ್ಷ ದಿಢೀರ್ ಲಾಭ ಆಯಿತು. ಇದಕ್ಕೆ ಕಾರಣ ಎಂದರೆ ನೂರಕ್ಕೆ ನೂರರಷ್ಟು ಬೆಲೆ ಜಾಸ್ತಿ ಆಯಿತು. ಇರತಕ್ಕಂಥ ದಾಸ್ತಾನನ್ನು ಮಾರಾಟ ಮಾಡಿದರು. ಇದನ್ನು ನಾನು ಲಾಭ ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇವರೇನು ೪೨ ಲಕ್ಷ ರೂಪಾಯಿ ಹೊರಗಡೆ ಸಾಲ ಕೊಟ್ಟಿದ್ದಾರೆ ಅದೆಲ್ಲಾ ಸಂಸ್ತಿ ಆಗಿದೆ, ಆ ಸಾಲ ವಾಪಸ್ ಬಂದಾಗ ನಾವು ಜಮಾ ಖರ್ಚು ಮಾಡಿ, ಲಾಭ ನಷ್ಟ ಎಂದು ಹೇಳುವುದಕ್ಕೆ ಸಾಧ್ಯವೇ ಹೊರತು ಇವತ್ತಿನ ದಿವಸ ಇದನ್ನು ಲಾಭ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ತಾವು ಇದನ್ನು ಮನಸ್ಸಿಗೆ ಹಚ್ಚಿಕೊಂಡು ನೋಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಇದರ ಲಾಭ ನಷ್ಟ ಮುಖ್ಯ ಅಲ್ಲ. ನನಗೆ ಇದು ಮಾರ್ಕೆಟ್‌ನಲ್ಲಿ ಲಾಭ ನಷ್ಟ ಗಳಿಸತಕ್ಕದ್ದು ಮುಖ್ಯ ಅಲ್ಲ, ಇದೇನೂ ದೊಡ್ಡ ವರ್ತಕನಂತ ಕೆಲಸ ಮಾಡಬೇಕೆಂಬ ಇಚ್ಛೆ ನನಗೆ ಇಲ್ಲ. ನನ್ನ ಅವಶ್ಯಕತೆ ಏನೆಂದರೆ ಮಾರ್ಕೆಟ್‌ನಲ್ಲಿ ರೇಷ್ಮೆ ಬೆಲೆಯನ್ನು ಹೆಚ್ಚು ಸ್ಥಿರವಾಗಿರುವಂತೆ ಮಾಡಲು, ಇದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟು ಕೆಲಸ ಮಾಡಬೇಕು. ಲಾಭ ನಷ್ಟವೇ ಮುಖ್ಯ ಅಲ್ಲ. ಇದಕ್ಕೆ ಏನು ಮಾಡಬೇಕೆಂದರೆ, ಸಾಕಷ್ಟು ಬಂಡವಾಳ ಕೊಡಬೇಕು. ಹೊರಗಡೆ ಎರಡು ಸಾವಿರ, ಮೂರು ಸಾವಿರ ಟನ್ ರೇಷ್ಮೆ ಏನು ಮಾರಾಟಗಾರರ ಕೈಗೆ, ಮರ್ಚೆಂಟ್ಸ್ ಕೈಗೆ ಹೋಗುತ್ತದೆ ಅದನ್ನು ತಡೆಗಟ್ಟಬೇಕು. ತಾವು ೫೦ ಪರ್ಸೆಂಟ್ ಸಾಲ ಕೊಟ್ಟು ಉಳಿದ ೫೦

ಪರ್ಸೆಂಟ್ ನೀವು ಹಾಕಿಕೊಂಡು ಬೆಲೆ ನಿಯಂತ್ರಣ ಮಾಡಿರಿ ಎಂದು ಹೇಳಿದರೆ ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಂತಹ ಎಕ್ಸ್‌ಪರ್ಟ್ಸ್ ಇದ್ದರೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಲ್ಲಿ ಲೂಪ್‌ಹೋಲ್ ಎಲ್ಲೆಲ್ಲಿದೆ, ಎಲ್ಲೆಲ್ಲಿ ಸೋರಿ ಹೋಗುತ್ತದೆ ಅದನ್ನು ತಡೆಗಟ್ಟಬೇಕು. ಎಲ್ಲಾ ರೇಷ್ಮೆಯೂ ಜಿಲ್ಲಾ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬಂದಾಗ ಮಾತ್ರ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಿಂದೆ ಕೆ.ಎಸ್ ಐ.ಸಿ. ನವರು ನಾಯಿಲ್ ರೇಷ್ಮೆಯನ್ನು ತೆಗೆದುಕೊಂಡರು. ಕೆ.ಎಸ್. ಎಂ.ಬಿ. ಮತ್ತು ಕೆ.ಎಸ್.ಐ.ಸಿ. ಇವೆರಡಕ್ಕೂ ನೀವು ಚೇರ್ಮನರು. ಇವೆರಡೂ ಮಾನ್ಯ ಮಂತ್ರಿಗಳ ಕಂಟ್ರೋಲ್‌ನಲ್ಲಿ ಬರುತ್ತದೆ ನಿಮ್ಮ ಹಿಡಿತದಲ್ಲಿದೆ. ಬೋರ್ಡ್ ಆಫ್ ಡೈರೆಕ್ಟರ್ಸ್ ಎಲ್ಲಾ ಇದನ್ನು ತೆಗೆದುಕೊಳ್ಳಬಾರದು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಆದರೂ ಕೂಡಾ ಇದನ್ನು ತೆಗೆದುಕೊಂಡಿದ್ದಾರೆ, ಅನೇಕ ಲಕ್ಷ ರೂಪಾಯಿಗಳ ನಷ್ಟವಾಗಿದೆ. ಇದರ ಬಗ್ಗೆ ನಾನೂ ಕಾಲಿಂಗ್ ಅಟೆನ್ಷನ್ ಹಾಕಿದ್ದೆ. ಮಾನ್ಯ ಮಂತ್ರಿಗಳಾಗಿದ್ದ ವೈ. ಕೆ. ರಾಮಯ್ಯನವರೋ ಅಥವಾ ಮುನಿಯಪ್ಪನವರೋ ಉತ್ತರ ಕೊಟ್ಟರು ಎಂದು ಕಾಣುತ್ತದೆ. ಇನ್ನೂ ಕೂಡಾ ನನಗೆ ಅನುಮಾನ ಇದೆ. ಬಹಳ ಸ್ಕ್ಯಾಂಡಲ್ ಇರಬಹುದು. ಇದರ ಬಗ್ಗೆ ದೃಷ್ಟಿಹರಿಸಿ ನೋಡಿ, ಇದು ಏತಕ್ಕೆ ಆಯಿತು ಹೇಗೆ ಆಯಿತು ಎಂಬುದನ್ನು ಒಳಹೊಕ್ಕು ನೋಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎಲ್ಲಾ ಡೈರೆಕ್ಟರ್ಸ್ ಸಹ ಐ.ಎ.ಎಸ್., ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಆಪಾದನೆ ಮಾಡುವುದಿಲ್ಲ. ನನ್ನ ದೃಷ್ಟಿಯಲ್ಲಿ ಐ.ಎ.ಎಸ್. ಎಂದರೆ ಐ ಆಮ್ ಸೇಫ್ ಎಂದು. ಅವರು ಸೇಫ್, ನಾವೆಲ್ಲಾ ಅವರನ್ನು ನಂಬಿ ಕೆಟ್ಟುಹೋದೆವು. ಈ ತರಹದ ಸ್ಥಿತಿ ಬಂದಿದೆ. ದಯವಿಟ್ಟು ಈ ಒಂದು ವಿಚಾರದಲ್ಲಿ ತರಬೇತಿ ಹೊಂದಿರತಕ್ಕಂಥ ತಜ್ಞರನ್ನು ನೀವು ಡೈರೆಕ್ಟರನ್ನಾಗಿ ನೇಮಕ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಐ.ಎ.ಎಸ್. ಎಂದರೆ ಐ ಆಮ್ ಸೇಫ್. ಆದರೆ ಕೆ.ಎ.ಎಸ್. ಎಂದರೆ ಏನು ಹೇಳುತ್ತೀರಿ ?

ಶ್ರೀ ಜಿ. ರಾಜುಗೌಡ.—ಬಡ ನೇಕಾರರ ಬಗ್ಗೆ ತಾವು ಯೋಚನೆ ಮಾಡಬೇಕು. ಇದನ್ನೇ ಅವಲಂಬಿಸಿರತಕ್ಕಂಥ ನೇಕಾರರು ಎಷ್ಟು ಜನ ಇದ್ದಾರೆ ಎಂಬುದನ್ನು ಐಡೆಂಟಿಫೈ ಮಾಡಿಸಿ ಅವರಿಗೆ ಒಂದು ತಿಂಗಳಲ್ಲಿ ಹಸಿರು ಕಾರ್ಡ್ ಕೊಟ್ಟು ಸಹಾಯ ಮಾಡಬೇಕು. ಇನ್ನು ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಸಾಲ ಕೊಡಬೇಕಾದ ಅವಶ್ಯಕತೆ ಇಲ್ಲ. ಹುರಿ ಮಾಡಿರತಕ್ಕಂಥ ರೇಷ್ಮೆಗೆ ಹೆಚ್ಚು ಬೆಲೆ ಇದೆ. ಹೆಚ್ಚು ಡಿಮ್ಯಾಂಡ್ ಇದೆ. ಅದನ್ನು ಕ್ಯಾಷ್ ಕೊಟ್ಟು ತೆಗೆದುಕೊಳ್ಳುತ್ತಾರೆ. ಎಷ್ಟು ಸಾವಿರ ಕೆ.ಜಿ. ಇದ್ದರೂ ತೆಗೆದುಕೊಳ್ಳುತ್ತಾರೆ. ಇದನ್ನು ಮಾಡಿದರೆ ಅನೇಕ ಜನರಿಗೆ ಉದ್ಯೋಗ ಕೊಟ್ಟ ಹಾಗೆ ಆಗುತ್ತದೆ, ನಮಗೆ ಲಾಭ ಬಂದ ಹಾಗೆ ಆಗುತ್ತದೆ. ಇದನ್ನು ಏತಕ್ಕೆ ಮಾಡಬಾರದು ? ಸಾಲ ಕೊಡುವ ಬದಲು ರೇಷ್ಮೆ ಹುರಿ ಮಾಡಿಸಿದರೆ, ಟ್ವಿಸ್ಟ್ ಮಾಡಿಸಿದರೆ, ಅದಕ್ಕೆ ಬೇಡಿಕೆ ಜಾಸ್ತಿ ಇದೆ, ಇದರಿಂದ ಜನಗಳಿಗೆ ಕೆಲಸ ಕೊಟ್ಟ ಹಾಗೂ ಆಗುತ್ತದೆ, ಲಾಭ ಬಂದ ಹಾಗೂ ಆಗುತ್ತದೆ, ಸಾಲ ಕೊಡಬೇಕಾದ ಅವಶ್ಯಕತೆ ಇಲ್ಲ, ಇದನ್ನು ತಾವು ದಯವಿಟ್ಟು ತಾವು ಅಧಿಕಾರಿಗಳ ಜೊತೆ ಹೇಳಿ ಸಾಲ ಕೊಡುವುದನ್ನು ಆದಷ್ಟು ಕಡಿಮೆ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಇನ್ನು ಗೌರ್ನಮೆಂಟ್ ಸಿಲ್ಕ್ ಫಿಲೇಚರ್ಸ್ ಬಗ್ಗೆ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ೭ ರೇಷ್ಮೆ ಕಾರ್ಖಾನೆಗಳು ಇವೆ. ಅದರಲ್ಲಿ ಎರಡನ್ನು ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ನವರು ನಡೆಸುತ್ತಾರೆ, ಇನ್ನುಳಿದ ಐದನ್ನು ನಮ್ಮ ಇಲಾಖೆಯವರು ನಡೆಸುತ್ತಿದ್ದಾರೆ, ಇವು ಪ್ರಾರಂಭದಿಂದ ಇಲ್ಲಿಯವರೆಗೆ ನಷ್ಟದಲ್ಲೇ ನಡೆಯುತ್ತಿವೆ. ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ ಈ ಮೂರು ವರ್ಷಗಳಲ್ಲಿ ೪೫೫.೭೮ ಲಕ್ಷ ರೂಪಾಯಿಗಳ ನಷ್ಟ ಅನುಭವಿಸಿ. ನಮ್ಮ ಮೈಸೂರು ಜಿಲ್ಲೆಯಲ್ಲೇ ನಾಲ್ಕು ರೇಷ್ಮೆ ಕಾರ್ಖಾನೆಗಳಿವೆ. ಅವುಗಳಲ್ಲಿ ಒಟ್ಟು ೨೯೮ ಬೇಸಿನ್‌ಗಳಿವೆ. ಆಗಿನ ಕಾಲದಲ್ಲಿ ಇದಕ್ಕೆ ಬಂಡವಾಳ ಹಾಕಿರತಕ್ಕದ್ದು ೭ ಕೋಟಿ ೭೭ ಲಕ್ಷದ ೯೩ ಸಾವಿರ ರೂಪಾಯಿಗಳು. ಬಂಡವಾಳದ ನಾಲ್ಕರಷ್ಟು ನಷ್ಟವಾಗಿದೆ. ಸ್ವಾಮಿ, ನಾನು ಒಂದು ವಿಷಯ ತಮಗೆ ಹೇಳುತ್ತೇನೆ. ಈ ಸಿಲ್ಕ್ ಫಿಲೇಚರ್‌ಗಳನ್ನೆಲ್ಲಾ ಮುಚ್ಚಿಬಿಟ್ಟು, ಅಲ್ಲಿರತಕ್ಕಂಥ ಕಾರ್ಮಿಕರಿಗೆ ವರ್ಷ ಪೂರ್ತಿ ವೇತನ ಕೊಟ್ಟರೆ ಎಷ್ಟು ನಷ್ಟವಾಗುತ್ತದೋ ಅದಕ್ಕಿಂತ ಡಬ್ಬಲ್ ತ್ರಿಬ್ಬಲ್ ನಷ್ಟವಾಗಿದೆ ನಾನು ಇದರ ಬಗ್ಗೆ ಅಂಕಿ ಅಂಶಗಳನ್ನು ಹೇಳುತ್ತೇನೆ. ಕೊಳ್ಳೆಗಾಲದ ರೇಷ್ಮೆ ಕಾರ್ಖಾನೆಯಲ್ಲಿ ೧೯೮೬-೮೭, ೧೯೮೭-೮೮ರಲ್ಲಿ ಎಷ್ಟು ರೇಷ್ಮೆ ಉತ್ಪಾದನೆ ಆಯಿತು ಎಷ್ಟು ನಷ್ಟವಾಯಿತು ಎಂಬುದನ್ನು

ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೊಳ್ಳೆಗಾಲ ರೇಷ್ಮೆ ಕಾರ್ಖಾನೆಯಲ್ಲಿ ಒಂದು ಕೆ.ಜಿ. ರೇಷ್ಮೆ ಉತ್ಪಾದನೆಗೆ ೪೦೦ ರೂಪಾಯಿಗಳ ನಷ್ಟವಾಗುತ್ತಿದೆ.

ಇನ್ನು ಮಳವಳ್ಳಿ ಸಿಲ್ಕ್ ಫಿಲೇಚರ್‌ನಲ್ಲಿ ಒಂದು ಕೆ.ಜಿ.ಗೆ ೩೦೭ ರೂಪಾಯಿಗಳ ನಷ್ಟವಾಗಿದೆ. ಆಮೇಲೆ ಚಾಮರಾಜನಗರ ಫಿಲೇಚರ್‌ನಲ್ಲಿ ೩೮೮ ರೂಪಾಯಿಗಳ ನಷ್ಟವಾಗಿದೆ. ಸಂತೇಬೆನ್ನೂರಿನಲ್ಲಿ ಒಂದು ಕೆ.ಜಿ.ಗೆ ೨೫೨ ರೂಪಾಯಿಗಳು ನಷ್ಟವಾಗುತ್ತಿದೆ. ಇನ್ನು ಸರ್ಕಾರಿ ಫಿಲೇಚರ್‌ಗಳಲ್ಲಿ ತಯಾರು ಮಾಡುತ್ತಿರುವ ಹುರಿ ರೇಷ್ಮೆಯಲ್ಲಿ ಸುಮಾರು ೬೭ ರೂಪಾಯಿಗಳು ಒಂದು ಕೆ.ಜಿ.ಗೆ ನಷ್ಟವಾಗುತ್ತಿದೆ. ಇಷ್ಟೊಂದು ನಷ್ಟ ಯಾವ ರೀತಿಯಾಗುತ್ತಿದೆ ಎನ್ನುವುದನ್ನು ತಾವು ಸ್ವಲ್ಪ ಒಳಹೊಕ್ಕು ನೋಡಿದರೆ ತಮಗೆ ಗೊತ್ತಾಗುತ್ತದೆ. ಈ ನಷ್ಟವನ್ನು ಕಡಿಮೆ ಮಾಡಲು ನಾನು ಹಿಂದೆ ಒಂದು ಸಲಹೆಯನ್ನು ಕೊಟ್ಟಿದ್ದೆ. ಆಗ ಅದನ್ನು ಹಿಂದಿನ ಮಂತ್ರಿಗಳು ಯಾರೂ ಗಮನಿಸಲಿಲ್ಲ. ಆದರೂ ಈಗ ಒಂದು ಸಲಹೆ ಮಾಡುವುದೇನೆಂದರೆ ಮಾರ್ಕೆಟ್‌ನಿಂದ ಕೊಂಡುತಂದಂಥ ಗೂಡು ಎಲ್ಲಾ ಫಿಲೇಚರ್ಸ್‌ಗೂ ಸರಿಸಮಾನವಾಗಿ ಹಂಚಿಕೆ ಮಾಡಿಕೊಡಬೇಕು. ಮಾರ್ಕೆಟ್‌ನಲ್ಲಿ ಕೊಂಡಂತಹ ಗೂಡನ್ನು ಮತ್ತೆ ಫಿಲೇಚರ್‌ನಲ್ಲಿ ಒಂದು ಸಾರಿ ತೂಕ ಮಾಡಿ ಸರ್ಟಿಫೈ ಮಾಡಬೇಕು. ಆಗ ಯಾವ ಯಾವ ಫಿಲೇಚರ್‌ನಲ್ಲಿ ಎಷ್ಟೆಷ್ಟು ರೇಷ್ಮೆ ಬರುತ್ತದೆಂದು ಗೊತ್ತಾಗುತ್ತದೆ. ಆಮೇಲೆ ನಾನು ಇನ್ನೊಂದು ಸಲಹೆ ಕೊಡುವುದೇನೆಂದರೆ ಈ ನಷ್ಟವನ್ನು ಸರಿ ಮಾಡಲು ಸರ್ಕಾರಿ ಫಿಲೇಚರ್ಸ್ ಇರಬೇಕು ಆ ಕಡೆ ಖಾಸಗಿ ಫಿಲೇಚರ್ಸ್ ಸಹ ಇರಬೇಕು. ಖಾಸಗಿ ಫಿಲೇಚರ್ಸ್ ಮುಚ್ಚಿ ಎಂದು ಹೇಳುವುದಕ್ಕಾಗುವುದಿಲ್ಲ. ರೇಷ್ಮೆ ಉದ್ದಿಮೆಯಲ್ಲಿ ಹುರಿ ತೆಗೆಯಲು ಖಾಸಗಿಯವರು ಇರಬೇಕು, ಸರ್ಕಾರದ ಫಿಲೇಚರ್ಸ್ ಸಹ ಇರಬೇಕು. ಖಾಸಗಿ ಫಿಲೇಚರ್ಸ್ ಸುಮಾರು ಒಂದು ೭೦೦ ಇರಬಹುದು. ಈ ಸರ್ಕಾರಿ ಫಿಲೇಚರ್ಸ್ ಇರದಿದ್ದರೆ ಖಾಸಗಿಯವರು ಒಂದು ಒಗ್ಗಟ್ಟು ಮಾಡಿಕೊಂಡು ಗೂಡು ತೆಗೆದುಕೊಂಡು ಬಂದಂತಹ ರೈತನಿಗೆ ತೊಂದರೆ ಮಾಡಬಹುದು ಅಥವಾ ಅವನಿಗೆ ಮೋಸ ಮಾಡಬಹುದು. ಆದ್ದರಿಂದ ಸರ್ಕಾರಿ ಫಿಲೇಚರ್ಸ್ ಸಹ ಇರಬೇಕು ಮತ್ತು ಖಾಸಗಿ ಫಿಲೇಚರ್ಸ್ ಇರಬೇಕು. ರೈತರಿಗೆ ಅನ್ಯಾಯವಾಗಬಾರದು. ಆದ್ದರಿಂದ ನಾನು ಸರ್ಕಾರದ ಫಿಲೇಚರ್ಸ್ ಇರಬೇಕೆಂದು ಹೇಳುವವನು. ಬೇಕಾದರೆ ತಾವು ಹಂತಹಂತವಾಗಿ ಸರ್ಕಾರಿ ಫಿಲೇಚರ್‌ಗಳಲ್ಲಿ ಸುಧಾರಣೆ ತನ್ನಿ. ಈ ಸುಧಾರಣೆ ತರಬೇಕಾದರೆ ನಾನು ಒಂದು ಸಲಹೆ ಮಾಡುತ್ತೇನೆ, ಅದೇನೆಂದರೆ ಸರ್ಕಾರಿ ಫಿಲೇಚರ್‌ಗಳನ್ನು ಒಂದೇ ಸಾರಿ ಮುಚ್ಚಿ ಎಂದು ನಾನು ಹೇಳುವುದಿಲ್ಲ. ಈ ರೇಷ್ಮೆ ಫಿಲೇಚರ್‌ಗಳಲ್ಲಿರತಕ್ಕಂಥ ಕೆಲಸಗಾರರು ಯಾರಿದ್ದಾರೆ ಅವರು ನಿವೃತ್ತಿಯಾದಂತೆಲ್ಲಾ ಅವರ ಸ್ಥಳಕ್ಕೆ ಬೇರೆಯವರನ್ನು ತುಂಬಬೇಡಿ. ಆ ರೀತಿ ಮಾಡುತ್ತಾ ಹೋದರೆ ಕನಿಷ್ಟ ಪಕ್ಷ ಇನ್ನು ೩—೪ ವರ್ಷಗಳಲ್ಲಿ ಈಗಿರುವಂತಹವರೆಲ್ಲರೂ ನಿವೃತ್ತಿಯಾಗುತ್ತಾರೆ. ಕೊನೆಯಲ್ಲಿ ಉಳಿದುಕೊಳ್ಳುವಂತಹ ೪೦—೫೦ ಜನರಿಂದ ಒಳ್ಳೆಯ ಕೆಲಸ ತೆಗೆದುಕೊಳ್ಳಬಹುದು. ಈಗ ಅಲ್ಲಿ ಏನಾಗಿದೆ ಎಂದರೆ ಓವರ್ ಎಂಪ್ಲಾಯ್‌ಮೆಂಟ್ ಆಗಿದೆ. ಎಂಪ್ಲಾಯ್‌ಮೆಂಟ್‌ಗೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತಿದೆ. ಕಾನೂನು ಪ್ರಕಾರ ಯಾರನ್ನೂ ಕೆಲಸದಿಂದ ತೆಗೆದುಹಾಕುವುದಕ್ಕೆ ಬರುವುದಿಲ್ಲ. ಒಬ್ಬೊಬ್ಬರೇ ನಿವೃತ್ತಿಯಾಗುತ್ತಾ ಹೋದರೆ ಆಗ ಈ ಫಿಲೇಚರ್ಸ್‌ನ್ನು ಮುಚ್ಚಬಹುದು. ಇನ್ನು ನಮ್ಮ ರಾಜ್ಯದಲ್ಲಿ ರೇಷ್ಮೆ ಗೂಡಿನ ಮಾರ್ಕೆಟ್‌ಗಳು ಸುಮಾರು ೯೬೭ ಇವೆ. ಈ ರೇಷ್ಮೆ ಗೂಡು ಮಾರ್ಕೆಟ್‌ಗಳ ಪಕ್ಕದಲ್ಲಿ ಕಾಮನ್ ರೀಲಿಂಗ್ ಫ್ಯಾಕ್ಟರಿಗಳನ್ನು ಮಾಡಿ. ಒಂದೊಂದು ಫ್ಯಾಕ್ಟರಿಯಲ್ಲಿ ಸುಮಾರು ೧೫—೨೦ ಬೇಸಿನ್‌ಗಳು ಇದ್ದರೆ ಸಾಕು. ಈ ೯೬೭ ಫ್ಯಾಕ್ಟರಿಗಳಿಗೆ ಬೇಕಾದಂತಹ ರೇಷ್ಮೆ ಪಕ್ಕದಲ್ಲಿ ಇರತಕ್ಕಂಥ ರೇಷ್ಮೆ ಮಾರುಕಟ್ಟೆಯಿಂದಲೇ ಕೊಂಡುಕೊಳ್ಳಬಹುದು. ಆಗ ನಮ್ಮಲ್ಲಿ ಉತ್ಪಾದನೆಯಾಗತಕ್ಕಂಥ ಎಲ್ಲಾ ರೇಷ್ಮೆಯನ್ನು ನಾವೇ ಬಳಸಿಕೊಳ್ಳಬಹುದು. ಆಗ ನಷ್ಟವು ಆಗುವುದಿಲ್ಲ. ತಾವು ಪ್ರಯತ್ನ ಮಾಡಿದರೆ ಸಾಧ್ಯವಾಗುತ್ತದೆ. ಇದು ಬಹಳ ಮುಖ್ಯವಾಗಿ ಮಾಡಬೇಕಾದ ಕೆಲಸ ಇದನ್ನು ತಾವು ದಯವಿಟ್ಟು ಮಾಡಬೇಕು. ಈಗ ನಷ್ಟವಾಗಿರತಕ್ಕಂಥ ಸಂಸ್ಥೆಗಳಲ್ಲಿ ಆಗ ಲಾಭ ಸಂಪಾದನೆ ಮಾಡಬಹುದು. ಈ ರೇಷ್ಮೆ ಬೇಸಿನ್‌ಗಳನ್ನು ಹಾಕಿಕೊಂಡಿರತಕ್ಕಂಥ ಖಾಸಗಿಯವರು ಸುಮಾರು ೯,೬೦೭ ಜನ ಇದ್ದಾರೆ. ಖಾಸಗಿಯವರು ರೇಷ್ಮೆ ನೂಲು ತೆಗೆಯಬಹುದು ಸರ್ಕಾರಿ ವಲಯಗಳಿಂದ ರೇಷ್ಮೆ ನೂಲು ತೆಗೆಯಲು ಆಗುವುದಿಲ್ಲವೇ ? ಖಾಸಗಿಯವರು ರೇಷ್ಮೆನೂಲು ತೆಗೆದು ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೆ. ಇದನ್ನು ನಾವು ಹಳ್ಳಿಗಳಲ್ಲಿ ನೋಡುತ್ತಿದ್ದೇವೆ. ಖಾಸಗಿಯವರು ಒಮ್ಮೆ ರೇಷ್ಮೆ ನೂಲು ತೆಗೆಯುವುದನ್ನು ಬಿಟ್ಟು ಮತ್ತೆ ಪ್ರಾರಂಭ ಮಾಡಿದರೂ ಸಹ ಅವನಿಗೆ ಲಕ್ಷಾಂತರ

ರೂಪಾಯಿಗಳ ಸಂಪಾದನೆ ಇದೆ. ಯಾರು ಸಹ ಇದರಿಂದ ನಷ್ಟವಾಗುತ್ತಿಲ್ಲ. ಆದ್ದರಿಂದ ದಯಮಾಡಿ ತಾವು ಮಾರ್ಕೆಟ್‌ಗಳ ಪಕ್ಕದಲ್ಲಿ ರೇಷ್ಮೆ ನೂಲು ಬಿಚ್ಚುವ ಬೇಸಿನ್‌ಗಳನ್ನು ಹಾಕುವ ವ್ಯವಸ್ಥೆ ಮಾಡಬೇಕು. ಇನ್ನು ತಮ್ಮ ಇಲಾಖೆಯವರು ನನಗೆ ತಿಳಿದಹಾಗೆ ಅವರಿಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳುತ್ತಾರೆ. ಅವು ಯಾವುವೆಂದರೆ ೭೭ ಟೂತ್‌ಗಿಯರ್ಸ್, ೭೧ ಚಿಮನ್‌ಗೈಡ್ ಪಿನ್ಸ್ ಕ್ಲಾಂಪ್ಸ್, ಎಲ್. ಕ್ಯಾಂಪ್ಸ್, ಬುಶ್ ಇತ್ಯಾದಿ ಸಾಮಾನುಗಳು ಫ್ಯಾಕ್ಟರಿಗಳಿಗೆಬೇಕಾಗುತ್ತವೆ. ಈ ಸಾಮಾನುಗಳನ್ನು ಮೈಸೂರಿನಲ್ಲಿ ಕೋದಂಡರಾಮಯ್ಯ ಎನ್ನುವವರಿಂದಲೇ ಕೊಂಡುಕೊಳ್ಳುತ್ತಾರೆ. ಈತ ಒಂದೇ ಒಂದು ಲೈಸೆನ್ಸ್ ಇಟ್ಟುಕೊಂಡು ಆ ಒಂದು ಲೈಸೆನ್ಸ್‌ನಲ್ಲಿ ಬೇರೆ ಬೇರೆ ಹೆಸರುಗಳಿಂದ ಸಾಮಾನುಗಳನ್ನು ಮಾರಾಟ ಮಾಡುತ್ತಾರೆ. ಅವರಲ್ಲಿ ಬಾಲಾಜಿ ಇಂಜಿನೀಯರ್ಸ್ ಎಂದು ಒಂದೇ ಒಂದು ಲೆಟರ್‌ಹೆಡ್ ಇರುವುದು. ಅದರ ಮುಖಾಂತರ ಇವರು ನಾನಾ ಹೆಸರುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಆ ಹೆಸರುಗಳೆಂದರೆ ಉಜಾಲ ಇಂಜಿನೀಯರಿಂಗ್ ವರ್ಕ್ಸ್, ಆನಂದ ಇಂಜಿನೀಯರಿಂಗ್ ವರ್ಕ್ಸ್, ವೆಂಕಟೇಶ್ವರ ಇಂಜಿನೀಯರಿಂಗ್ ವರ್ಕ್ಸ್, ರಾಜರಾಜೇಶ್ವರಿ ಇಂಜನೀಯರಿಂಗ್ ವರ್ಕ್ಸ್ ಎಂಬ ಹೆಸರುಗಳು ಇವೆ. ಈ ಫಿಲೇಚರ್ಸ್‌ನವರಿಗೆ ಏನಾದರೂ ಸಾಮಾನುಗಳು ಬೇಕಾದಾಗ ಟೆಂಡರ್ ಕರೆಯುತ್ತಾರೆ. ಇವರು ನಾನಾ ಹೆಸರುಗಳನ್ನು ಇಟ್ಟುಕೊಂಡಿರುವುದರಿಂದ ಎಲ್ಲಾ ಹೆಸರುಗಳಲ್ಲಿ ಟೆಂಡರ್ ಅರ್ಜಿ ಸಲ್ಲಿಸುತ್ತಾರೆ. ಕೊನೆಗೆ ಇವರದ್ದೇ ಟೆಂಡರ್ ಅನ್ನು ಡಿಪಾರ್ಟ್‌ಮೆಂಟ್‌ನವರು ಅಕ್ಸೆಪ್ಟ್ ಮಾಡಿಕೊಳ್ಳುತ್ತಾರೆ. ಇದರಿಂದ ಈತ ಬೇಕಾದಷ್ಟು ಹಣ ಸಂಪಾದನೆ ಮಾಡಿದ್ದಾನೆ. ಸುಮಾರು ೫೦-೬೦ ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾನೆ. ದಯಮಾಡಿ ತಾವು ಇದನ್ನು ನೋಡಬೇಕು. ಇಲ್ಲಿ ಸ್ಟೋರ್‌ಕೀಪರ್ ಇವರು ಒಂದಾಗುವುದು, ಬೇಕಾದ ಸಾಮಾನುಗಳಿಗೆ ಆರ್ಡರ್ ಕೊಡುವುದು, ಕೊಂಡುಕೊಳ್ಳುವುದು. ಇವರು ಸುಮಾರು ೫೦೦ ರೂಪಾಯಿಗಳ ಸಾಮಾನುಗಳನ್ನು ಪರ್ಚೇಸ್ ಮಾಡುವುದಕ್ಕೆ ಅಧಿಕಾರ ಇದೆ. ಅದಕ್ಕಿಂತ ಜಾಸ್ತಿ ಪರ್ಚೇಸ್ ಮಾಡಬೇಕಾದರೆ ಡೈರೆಕ್ಟರ್ ಅವರ ಅನುಮತಿ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನೆಲ್ಲಾ ತಾವು ದಯಮಾಡಿ ಒಳಹೊಕ್ಕಿ ನೋಡಬೇಕು. ಆಗ ಈ ಫಿಲೇಚರ್‌ಗಳಲ್ಲಿ ನಷ್ಟ ಏತಕ್ಕೆ ಆಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಇದನ್ನೆಲ್ಲಾ ತಾವು ಸರಿ ಮಾಡಬೇಕು. ಇನ್ನು ಲಾರಿ ರಿಪೇರಿಗೆಂದು ಸ್ಪೇರ್‌ಪಾರ್ಟ್ಸ್ ಕೊಳ್ಳುತ್ತಾರೆ......

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ನಷ್ಟವಾಗತಕ್ಕಂಥ ಹಣದ ಮೊತ್ತ ಮತ್ತು ನಷ್ಟಕ್ಕೆ ಕಾರಣಗಳೇನು ಎನ್ನುವುದನ್ನು ತಿಳಿದುಕೊಳ್ಳಲು ನಮ್ಮ ಇಲಾಖಾ ಅಧಿಕಾರಿಗಳನ್ನು ಕರೆಸಿದ್ದೆ, ಅವರು ಸ್ವಲ್ಪ ಸಮಯ ತೆಗೆದುಕೊಂಡು ನೋಡಿ ಹೇಳಿದ್ದೇನೆಂದರೆ ಹೆಚ್ಚು ನಷ್ಟವಾಗುತ್ತಿರುವುದು ಸಂಬಳಕ್ಕೆಂದು ಈ ರೀತಿ ನಷ್ಟವಾಗಿರುವುದಕ್ಕೆ ಸಂಬಳಸಾರಿಗೆಗೆ ಹೆಚ್ಚು ಖರ್ಚು ಮಾಡಿರುವುದೇ ಆಗಿದೆಯೆಂದು ಅಧಿಕಾರಿಗಳು ಹೇಳಿದ್ದಾರೆ. ನಾವು ಎಲ್ಲಾ ಲೆಕ್ಕವನ್ನೂ ನೋಡಿದ್ದೇನೆ. ತಮಗೂ ಬೇಕಾದರೆ ಅದನ್ನು ಒದಗಿಸಿಕೊಡುತ್ತೇನೆ. ಸಣ್ಣಪುಟ್ಟ ಬಾಬುಗಳಲ್ಲಿ ಹೆಚ್ಚು ಕಡಿಮೆ ಆಗಿರಬಹುದು, ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಅದನ್ನೆಲ್ಲಾ ಸರಿಪಡಿಸುವುದಕ್ಕೆ ಮತ್ತು ಈ ಉದ್ದಿಮೆ ಲಾಭದಾಯಕವಾಗಿ ನಡೆಯುವಂತೆ ಮಾಡುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ತಾವು ಸಲಹೆ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜಿ. ರಾಜೂಗೌಡ.—ನಾನು ಸಲಹೆಗಳನ್ನು ಬೇಕಾದರೆ ಕೊಡುತ್ತೇನೆ ಸಂಬಳ ಸಾರಿಗೆ ಕೊಡುವುದರಿಂದಲೇ ಇಷ್ಟೆಲ್ಲ ನಷ್ಟವಾಯಿತೆಂದರೆ ನಾನು ಒಪ್ಪುವುದಿಲ್ಲ. ಈ ನಷ್ಟಕ್ಕೆ ಬೇರೆ ಬೇರೆ ಕಾರಣಗಳಿವೆ. ಅವುಗಳನ್ನು ತಮಗೆ ಬೇರೆ ಸಂದರ್ಭದಲ್ಲಿ ತಿಳಿಸುವುದಕ್ಕೆ ನಾನು ಇಚ್ಚೆಪಡುತ್ತೇನೆ,

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ರೇಷ್ಮೆ ಇಲಾಖೆ ಮಂತ್ರಿಯವರು ತಮ್ಮ ಇಲಾಖೆಯಲ್ಲಿ ಈ ನಷ್ಟ ಆಗುವುದನ್ನು ತಡೆಯುವುದಕ್ಕೆ ಸಲಹೆಗಳನ್ನು ಮಾನ್ಯ ಸದಸ್ಯರಾದ ರಾಜೂಗೌಡರವರಿಂದಲೇ ಕೇಳಿದ್ದಾರೆ. ನಾನು ಮಾನ್ಯ ಸಚಿವರಿಗೆ ಸಲಹೆ ಮಾಡುವುದೇನೆಂದರೆ, ಈಗಾಗಲೇ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಸಿರಿಕಲ್ಚರ್ ಡಿಪಾರ್ಟ್‌ಮೆಂಟ್ ಮೇಲೆ ಮತ್ತು ರೇಷ್ಮೆ ಫ್ಯಾಕ್ಟರಿಗಳ ಮೇಲೆ ವಿವರವಾಗಿ ವಿಚಾರ ಮಾಡಿ ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ. ನಾಳೆ ದಿನ ನೀವು ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿ ಆ ಎಲ್ಲಾ ರಿಪೋರ್ಟ್‌ಗಳನ್ನು ಓದಿಕೊಂಡು ಬಂದರೆ ಯಾರು

ಯಾರು ಈ ನಷ್ಟಕ್ಕೆ ಕಾರಣರಾಗಿದ್ದಾರೆ, ಯಾರು ಯಾರಿಂದ ಏನೇನು ಅನಾನುಕೂಲವಾಗಿದೆ, ಯಾರು ಯಾರು ಲೂಟಿ ಮಾಡಿದ್ದಾರೆ, ಹಣ ಹೊಡೆದಿದ್ದಾರೆ ಎಂದು ಗೊತ್ತಾಗುತ್ತದೆ. ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಸಹ ಉತ್ತರ ಕೊಡುವಾಗ ತಾವು ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ರೇಷ್ಮೆ ಉತ್ಪಾದಿಸುವ ಎಲ್ಲಾ ಉದ್ದಿಮೆಗಳಲ್ಲಿ ಸುಮಾರು ೪ ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ನಾನು ಎಲ್ಲವನ್ನೂ ಲೆಕ್ಕ ಹಾಕಿದ್ದೇನೆ. ಖಾಸಗಿ ಸಿಲ್ಕ್ ಫಿಲೇಚರ್‌ಗಳಲ್ಲಿ ಕೆಲಸ ಮಾಡತಕ್ಕವರು ಸುಮಾರು ೯ ಸಾವಿರ ಜನ ಇದ್ದಾರೆ. ಸರ್ಕಾರಕ್ಕೆ ಸೇರಿರುವ ಉದ್ದಿಮೆಗಳಲ್ಲಿ ಸ್ವಲ್ಪ ಕಡಿಮೆ ಜನ ಇದ್ದಾರೆ. ಖಾಸಗಿ ಕ್ಷೇತ್ರದಲ್ಲಿ ಇರುವ ಉದ್ದಿಮೆಗಳೆಲ್ಲಾ ಲಾಭದಾಯಕವಾಗಿ ಕೆಲಸ ಮಾಡುತ್ತಿವೆಂದು ನಾವು ಭಾವಿಸಬೇಕಾಗಿಲ್ಲ. ಅವುಗಳೂ ನಷ್ಟದಲ್ಲಿ ನಡೆಯುವ ಸಂದರ್ಭಗಳು ಇರುತ್ತವೆ. ಮಾನ್ಯ ರಾಜೂಗೌಡರು ಸರ್ಕಾರದ ರೇಷ್ಮೆ ಉದ್ದಿಮೆಗಳಲ್ಲಿ ಪ್ರತಿ ವರ್ಷ ಲಕ್ಷಗಟ್ಟಲೇ ನಷ್ಟವಾಗುತ್ತದೆ. ಎಂದು ಹೇಳಿದ್ದಾರೆ. ಮಾರ್ಚ್ ೩೧ರವರೆಗೆ ರೇಷ್ಮೆ ಉದ್ದಿಮೆಗಳಲ್ಲಿ ಏನೇನು ವಹಿವಾಟು ನಡೆದಿದೆ ಎಂಬ ಬಗ್ಗೆ ಸಂಪೂರ್ಣವಾದ ವಿವರಗಳನ್ನು ಅಂಕಿಅಂಶಗಳೊಡನೆ ಒದಗಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೇನೆ. ಸರ್ಕಾರದ ರೇಷ್ಮೆ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳಿಗೆ ಸಂಬಳ ಸಾರಿಗೆಯಿಂದಲೇ ಈ ನಷ್ಟಕ್ಕೆ ಕಾರಣ ಎನ್ನುವ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟಿದ್ದಾರೆ. ಬರೀ ಸಂಬಳ ಸಾರಿಗೆ ಕೊಡುವುದರಿಂದಲೇ ಈ ರೇಷ್ಮೆ ಉದ್ದಿಮೆಗಳಲ್ಲಿ ನಷ್ಟವಾಗಿದೆ ಎಂದು ಹೇಳುವುದಕ್ಕಾಗದಿದ್ದರೂ ಈ ನಷ್ಟಕ್ಕೆ ಬೇರೆ ಕಾರಣಗಳೂ ಇರಬಹುದು. ಬೇರೆ ಕಾರಣಗಳು ಇಲ್ಲವೆಂದು ನಾನು ಹೇಳುವುದಿಲ್ಲ. ಒಟ್ಟಾರೆ ಈ ಉದ್ದಿಮೆಗಳನ್ನು ಸರಿಪಡಿಸುವುದಕ್ಕೆ ನಾವೆಲ್ಲರೂ ಪ್ರಯತ್ನಿಸೋಣ. ಈಗ ಒಟ್ಟು ಐದು ಕಡೆ ಸಿಲ್ಕ್ ವಿನಿಮಯ ಕೇಂದ್ರಗಳು ಇವೆ. ಈ ವಿನಿಮಯ ಕೇಂದ್ರಗಳು ಇರುವ ಕಡೆಯೇ ಒಂದು ಸಿಲ್ಕ್ ಫಿಲೇಚರ್ (ರೇಷ್ಮೆ ಗೂಡುಗಳಿಂದ ದಾರ ತೆಗೆಯುವ ಉದ್ದಿಮೆ) ನ್ನು ಪ್ರಾರಂಭ ಮಾಡಿ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ನೋಡೋಣ. ಆಮೇಲೆ ಎರಡನೆಯದಾಗಿ ರೇಷ್ಮೆ ಉದ್ದಿಮೆಯನ್ನು ಲಾಭದಾಯಕವಾಗಿ ಮಾಡುವುದಕ್ಕೆ ಒಳ್ಳೆಯ ಸಲಹೆಗಳನ್ನು ಕೊಡಿ ಎಂದು ಮಾತ್ರ ನಾನೂ ಮಾನ್ಯ ರಾಜೂಗೌಡರಿಗೆ ಹೇಳಿದೆ. ಆದರೆ ಮಾನ್ಯ ಸದಸ್ಯರಾದ ಶ್ರೀ ಬಸವಲಿಂಗಪ್ಪನವರು ಅದನ್ನು ಸರಿಯಾಗಿ ಗ್ರಹಿಸಲಿಲ್ಲ ಅಷ್ಟೆ.

ಶ್ರೀ ಬಿ. ಬಸವಲಿಂಗಪ್ಪ.—ಪಬ್ಲಿಕ್ ಅಕೌಂಟ್ಸ್ ಕಮಿಟಿಯು ಈ ರೇಷ್ಮೆ ಉದ್ಯಮಗಳಲ್ಲಿ ಯಾವ ರೀತಿ ನಷ್ಟವಾಗುತ್ತಿದೆ, ಯಾರಿಂದ ನಷ್ಟವಾಗುತ್ತಿದೆ ಎಂಬುದನ್ನೆಲ್ಲಾ ಪರಿಶೀಲಿಸಿ ವರದಿಯನ್ನು ಕೊಟ್ಟಿದೆ. ನಾನೂ ಸಹ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಮೆಂಬರ್ ಆಗಿದ್ದೆ, ಚೇರ್ಮನ್ ಕೂಡ ಆಗಿದ್ದೆ. ಇಡೀ ರೇಷ್ಮೆ ಇಲಾಖೆ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ನಾವು ಸಲಹೆಗಳನ್ನು ವರದಿಗಳ ಮುಖಾಂತರ ಕೊಟ್ಟಿದ್ದೇವೆ, ಅದನ್ನು ಸರ್ಕಾರದವರು ಓದುವುದಿಲ್ಲ, ಈ ವರದಿಗಳನ್ನು ಕ್ಯಾಬಿನೆಟ್ ಮುಂದೆ ತರಬೇಕೆಂದು ಇದೆ. ಅದನ್ನೂ ತಾವು ಕ್ಯಾಬಿನೆಟ್ ಮುಂದೆ ತರುತ್ತಿಲ್ಲ. ನೀವು ಆ ರಿಪೋರ್ಟ್‌ಗಳನ್ನು ಓದಿದರೆ, ನಷ್ಟವಾಗುತ್ತಿರುವುದನ್ನು ಹೇಗೆ ತಡೆಗಟ್ಟುವುದು ಮತ್ತು ಈ ಸಂಸ್ಥೆಯನ್ನು ಲಾಭದಾಯಕವಾಗಿ ಹೇಗೆ ಮಾಡಬೇಕು ಎಂಬುದೆಲ್ಲಾ ಗೊತ್ತಾಗುತ್ತದೆಂದು ಮಾತ್ರ ನಾನು ಹೇಳಿದೆ ಅಷ್ಟೆ.

ಶ್ರೀ ಜಿ. ರಾಜೂಗೌಡ.—ಸರಕಾರದಲ್ಲಿ ನಡೆಸತಕ್ಕಂಥಾದ್ದು ನಷ್ಟದಲ್ಲಿ ಇರುತ್ತದೆ. ಅಂತಹ ಕಾರ್ಖಾನೆಗಳನ್ನು ಮುಚ್ಚಲಿಕ್ಕೆ ಆಗುವುದಿಲ್ಲ. ಆದುದರಿಂದ ಟೆಂಡರ್ ಕರೆದು ಯಾರಿಗಾದರೂ ವಹಿಸಿ ಕೊಡಿ, ಯಾಕೆಂದರೆ, ತಮ್ಮದೇ ಯಂತ್ರೋಪಕರಣ, ತಮ್ಮದೇ ಸ್ಥಳ, ಲೈಟ್ ವಗೈರೆ ಹೀಗೆ ಏನೆಲ್ಲಾ ನೀವು ಕೊಡುತ್ತೀರಿ, ಅದನ್ನು ಯಾರಾದರೂ ಟೆಂಡರ್ ಮೂಲಕ ವಹಿಸಿಕೊಂಡು ಮಾಡಲಿ. ಅಂದರೆ ರೇಷ್ಮೆ ವಿನಿಮಯ ಕೇಂದ್ರ ಎಲ್ಲಿದೆಯೋ ಅಲ್ಲಿ ಫಿಲೇಚರ್ ಮಾಡಬೇಕೆಂದು ಅಲ್ಲ. ಈ ೪೯ ಗೂಡುಗಳ ಮಾರ್ಕೆಟ್‌ಗಳು ಎಲ್ಲಿದೆಯೊ ಅಂತಹ ಕಡೆಗಳಲ್ಲಿ ಒಂದು ಫಿಲೇಚರ್ ಮಾಡಿ ಎಂದು ಹೇಳುತ್ತಿದ್ದೇನೆ. ಒಮ್ಮೆ ಈ ರೀಲರ್ಸ್ ಸ್ಟ್ರೈಕ್ ಮಾಡಿದರು. ಇಡೀ ಗೂಡುಗಳನ್ನು ನಮ್ಮ ಮಾರ್ಕೆಟ್‌ನವರು, ಫಿಲೇಚರ್‌ನವರು ಕೊಂಡುಕೊಳ್ಳಬೇಕಾದ ಸಂದರ್ಭ ಆಗ ಬಂತು. ಶ್ರೀಮತಿ ಚಂದ್ರಪ್ರಭಾ ಅರಸ್‌ರವರು ಆಗ ರೇಷ್ಮೆ ಇಲಾಖಾ ಮಂತ್ರಿಗಳಾಗಿದ್ದರು. ಆ ಸಮಯದಲ್ಲಿ ಗೂಡುಗಳನ್ನು ಎಲ್ಲಿಯೂ ಬಿಚ್ಚಲಿಕ್ಕೆ ಆಗಲಿಲ್ಲ. ಎಲ್ಲಾ ಕೊಳೆತು ಹೋಯಿತು. ಹೀಗೆ ಈ ಮಾಸ್ಟರ್ಸ್ ರೀಲರ್ಸ್‌ಗಳ ಹಾವಳಿಯನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ರೇಷ್ಮೆ ರೀಲಿಂಗ್ ಕಾಂಪ್ಲೆಕ್ಸ್‌ನ್ನು ಮಾಡಿದಾಗ ಬಡವರು

ತಾವಾಗಿ ತಮ್ಮ ಹೆಂಡತಿ ಮಕ್ಕಳೊಂದಿಗೆ ಒಂದು ರೇಷ್ಮೆಯನ್ನು ಬಿಚ್ಚುವ ವೃತ್ತಿಯನ್ನು ಮಾಡುತ್ತಾರೆ, ಆ ಮೂಲಕ ೧೦–೨೦ ರೂಪಾಯಿಗಳ ಸಂಪಾದನೆಯನ್ನೂ ಮಾಡಿಕೊಳ್ಳುವಂತಾಗುತ್ತಾರೆ. ಅದರ ಮೂಲಕ ಒಳ್ಳೆಯ ರೇಷ್ಮೆಯನ್ನು ಕೂಡ ತೆಗೆದ ಹಾಗೆ ಆಗುತ್ತದೆ. ಈ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ರಾಜೂಗೌಡರವರೇ, ತಮಗೆ ಇನ್ನೂ ಎಷ್ಟು ಸಮಯ ಮಾತನಾಡಲು ಬೇಕಾಗ ಬಹುದು?

ಶ್ರೀ ಜಿ. ರಾಜೂಗೌಡ.—ಇನ್ನು ಅರ್ಧ ಗಂಟೆ ಬೇಕು ಸ್ವಾಮಿ, ಇನ್ನೂ ಬೇರೆ ಕೆಲವು ಡಿಮ್ಯಾಂಡ ಗಳ ಮೇಲೆ ಮಾತನಾಡಬೇಕಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ತಮ್ಮ ಭಾಷಣವನ್ನು ಮುಗಿಸಿಬಿಡಲಿ ಎಂದು ನನ್ನ ಮನವಿ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಸದಸ್ಯರು ಇನಿಶಿಯೇಟ್ ಮಾಡಿದವರು, ಅವರಿಗೆ ಇನ್ನೂ ಹೆಚ್ಚಿನ ಸಮಯ ಬೇಕಾಗಬಹುದು, ಆದುದರಿಂದ ನಾಳೆಗೆ ಮುಂದುವರಿಸಿ...

ಅಧ್ಯಕ್ಷರು.—ಅವರು ೧೫–೨೦ ನಿಮಿಷಗಳ ಕಾಲಾವಧಿಯನ್ನು ತೆಗೆದುಕೊಂಡು ತಮ್ಮ ಮಾತು ಗಳನ್ನು ಹೇಳಿ ಮುಗಿಸಲಿ. ಅಂದರೆ ೫–೪೫ರ ತನಕ ಮಾತನಾಡಲಿ.

ಶ್ರೀ ಜಿ. ರಾಜೂಗೌಡ.—ನನಗೆ ರೇಷ್ಮೆ ಇಲಾಖೆ ಬಗ್ಗೆ ಮಾತನಾಡಲು ಅರ್ಧ ಗಂಟೆ ಬೇಕಾಗ ಬಹುದು. ಮತ್ತೆ ಉಳಿದ ವಿಷಯಗಳ ಬಗ್ಗೆಯೂ ಮಾತನಾಡಬೇಕಾಗಿದೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇನ್ನೂ ಅರ್ಧ ಗಂಟೆ ರೇಷ್ಮೆ ಬೇಡಿಕೆಯ ಮೇಲೆ ಮಾತ ನಾಡುವುದಾದರೆ ಉಳಿದ ವಿಭಾಗಗಳ ಬಗ್ಗೆ ಮಾತನಾಡುವುದು ಬೇಡವೇ? ಆದುದರಿಂದ......

ಅಧ್ಯಕ್ಷರು.—ಅವರು ತಮ್ಮ ಮಾತುಗಳನ್ನು ನಿಗದಿತ ಸಮಯದಲ್ಲಿ ಮುಗಿಸುತ್ತಾರೆ. ಯಾರೂ ಮಧ್ಯ ಪ್ರವೇಶ ಮಾಡಬಾರದು...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಇನಿಶಿಯೇಟ್ ಮಾಡಿರುವುದರಿಂದ ಎಲ್ಲಾ ಬೇಡಿಕೆ ಗಳ ಮೇಲೆಯೂ ಮಾತನಾಡಬೇಕಾಗುತ್ತದೆ. ಅವರು ಎಲ್ಲಾ ಬೇಡಿಕೆಗಳ ಬಗ್ಗೆಯೂ ಮಾತನಾಡು ತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಇವೊತ್ತು ರೇಷ್ಮೆ ಇಲಾಖೆಯ ಮೇಲೆ ಮಾತನಾಡಿ ಮುಗಿಸಲಿ, ನಾಳೆಯ ದಿವಸ ಉಳಿದುದನ್ನು ಮುಂದುವರಿಸಲಿ. ಏಕೆಂದರೆ ಅವರು ಇನಿಶಿಯೇಟ್ ಮಾಡಿದ್ದಾರೆ.

ಅಧ್ಯಕ್ಷರು.—ರಾಜೂಗೌಡರೇ, ತಾವು ಇವೊತ್ತು ರೇಷ್ಮೆ ವಿಭಾಗದ ಮೇಲೆ ತಮ್ಮ ಭಾಷಣ ವನ್ನು ಮುಗಿಸಿ, ಮಿಕ್ಕಿದ್ದನ್ನು ನಾಳೆಗೆ ಮುಂದುವರಿಸಿ.

ಶ್ರೀ ಜಿ. ರಾಜೂಗೌಡ.—ಎಲ್ಲಿ ಈ ಗೂಡಿನ ಮಾರ್ಕೆಟ್ ಇದೆಯೋ ಅಂದರೆ ೪೯ ಕಡೆಗಳಲ್ಲಿ, ಅಲ್ಲೆಲ್ಲಾ ರೇಷ್ಮೆ ಬಿಚ್ಚತಕ್ಕಂಥ ಘಟಕಗಳನ್ನು ತಯಾರು ಮಾಡಿದಾಗ ಅನುಕೂಲವಾಗುತ್ತದೆ. ರೀಲಿಂಗ್ ಕಾಂಪ್ಲೆಕ್ಸ್‌ನ್ನು ಮಾಡತಕ್ಕಂಥ ಒಂದು ಕೆಲಸವನ್ನು ಮಾಡಿದರೆ ಈ ರೀತಿಯಲ್ಲಿ ಆಗತಕ್ಕಂಥ ನಷ್ಟವನ್ನು ತಪ್ಪಿಸಬಹುದು. ಮತ್ತು ಮಾಸ್ಟರ್ ರೀಲರ್ಸ್‌ಗಳ ಹಾವಳಿಯಿಂದ ಬೆಳೆಗಾರರನ್ನು ತಪ್ಪಿಸಿದ ಹಾಗೂ ಆಗುತ್ತದೆ. ಮತ್ತು ಗೂಡುಗಳಿಗೂ ಸ್ವಲ್ಪ ಹೆಚ್ಚಿಗೆ ಬೆಲೆ ಸಿಗುತ್ತದೆ. ಕಾಂಪಿ ಟೇಷನ್ ಜಾಸ್ತಿಯಾದಾಗ ತಾನಾಗಿಯೇ ಬೆಲೆಯೂ ಸ್ವಲ್ಪ ಹೆಚ್ಚಿಗೆಯಾಗುತ್ತದೆ. ಗೂಡುಗಳನ್ನು ಮಾರ್ಕೆಟ್‌ಗೆ ತರುವ ರೈತರಿಗೆ ತೂಕ ಇತ್ಯಾದಿಗಳಲ್ಲಿ ಮೋಸ ಮಾಡುತ್ತಾರೆ. ಯಾವ ರೈತರು ಇಲ್ಲಿಗೆ ಗೂಡುಗಳನ್ನು ತರುತ್ತಾರೆ, ಅವರೆಲ್ಲರೂ ವಿದ್ಯಾವಂತರಲ್ಲ. ಅವಿದ್ಯಾವಂತರೇ ಜಾಸ್ತಿಯಾಗಿರುತ್ತಾರೆ. ಈ ಗೂಡುಗಳನ್ನು ತೂಕ ಮಾಡತಕ್ಕಂಥವರು. ಕೊಂಡುಕೊಳ್ಳತಕ್ಕಂಥವರು ಇಬ್ಬರೂ ಸೇರಿ ಇವರಿಗೆ ಮೋಸ ಮಾಡುತ್ತಾರೆ. ತೂಕ ಮಾಡುವವನಿಗೆ ಇದು ಸಬ್ಸಿಡಿ ಲಾಟ್ ಎಂದು ಇನ್ನೊಬ್ಬನು ಹೇಳಿದ ಕೂಡಲೇ ಅವರು ತೂಕದಲ್ಲಿ ಒಂದೆರಡು ಕೆ.ಜಿ. ತಿಂದು ಬಿಡುತ್ತಾರೆ. ಹೀಗೆ ಬಡ ರೈತನಿಗೆ ಮೋಸವನ್ನು ಮಾಡುತ್ತಿರುತ್ತಾರೆ. ಹೀಗೆ ತೂಕದಲ್ಲಿ ಆಗುವ ಮೋಸದಿಂದಾಗಿ ೧೦೦ ರೂಪಾಯಿಗಳ ನಷ್ಟವಾದಂತಾಗುತ್ತದೆ. ಇದು ರೈತರಿಗೆ ಗೊತ್ತಾಗುವುದಿಲ್ಲ. ಅದನ್ನು ತಪ್ಪಿಸಲಿಕ್ಕೆ ಒಂದು

ವ್ಯವಸ್ಥೆಯನ್ನು ಮಾಡಲೇಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ರಾಜ್ಯದಲ್ಲಿ. ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ಎಂದು ಇದೆ. ಅದು ಕೆ.ಎಸ್.ಐ.ಸಿ. ಅದೊಂದು ದೊಡ್ಡ ಬಿಳಿಆನೆ,ರಾಮ...ರಾಮ... ಅದರಲ್ಲಿ ಎಷ್ಟು ನಷ್ಟ ಆಗುತ್ತಾ ಇದೆ ಎಂದರೆ, ಈ ನಿಗಮವನ್ನು ಏತಕ್ಕಾಗಿ ಸ್ಥಾಪನೆ ಮಾಡಿದ್ದಾರೋ ಎಂದು ನನಗನ್ನಿಸುತ್ತದೆ. ಅದು ಪ್ರಾರಂಭವಾದುದು ೧೯೮೦ನೇ ಇಸವಿಯಲ್ಲಿ Expansion and modernisation of Karnataka Silk industries Corporation. " ಕರ್ನಾಟಕ ಸಮಗ್ರ ರೇಷ್ಮೆ ಅಭಿವೃದ್ಧಿ ಕಾರ್ಯಕ್ರಮಗಳ ಕೆಳಗೆ ಮೈಸೂರು ರೇಷ್ಮೆ ನೇಯ್ಗೆ ಕಾರ್ಖಾನೆ, ಚೆನ್ನಪಟ್ಟಣ ಸ್ಪನ್‌ಸಿಲ್ಕ್ ಮಿಲ್ಸ್, ಟಿ. ನರಸೀಪುರ ರೇಷ್ಮೆ ಕಾರ್ಖಾನೆ, ಇವುಗಳನ್ನು ಆಧುನೀಕರಿಸಲು ಮತ್ತು ವಿಸ್ತರಿಸಲು, ವಿಶ್ವ ಬ್ಯಾಂಕ್, ಮತ್ತು ಹಣಕಾಸಿನ ಸಂಸ್ಥೆಗಳಾದ ಐಡಿಬಿಐ, ಐಎಫ್‌ಸಿಐ, ಐಸಿಐಸಿಐಯಿಂದ ೨೮.೪೪ ಕೋಟಿ ರೂಪಾಯಿಗಳ ಬಂಡವಾಳದಿಂದ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಪ್ರಾರಂಭದಿಂದಲೇ ಗ್ರಹಚಾರ ಶುರುವಾಯಿತು. ಒಳ್ಳೆಯ ಮುಹೂರ್ತದಲ್ಲಿ ಪ್ರಾರಂಭ ಮಾಡಿದ್ದಾರೆ ಎಂದು ಕಾಣುತ್ತದೆ. ಇನ್ನೂ ಅದಕ್ಕೆ ಬಾಲಗ್ರಹ ಬಿಟ್ಟಿಲ್ಲ.

ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದ ಉದ್ದೇಶವೇನಿತ್ತೆಂದರೆ ನಮ್ಮ ರಾಜ್ಯದಲ್ಲಿ ೧೦ ಸಾವಿರ ಮೆಟ್ರಿಕ್ ಟನ್ ಬಯಾಟಿನ್ ರೇಷ್ಮೆ ಉತ್ಪಾದನೆಯಾಗುತ್ತಿದ್ದು ಈ ಉದ್ದಿಮೆಯನ್ನು ಆಧುನೀಕರಣ ಮಾಡಿ ವಿಶ್ವ ಮಾರುಕಟ್ಟೆಯಲ್ಲಿ ಪೈಪೋಟಿ ನೀಡಬೇಕೆಂಬ ಘನ ಉದ್ದೇಶದಿಂದ ಸ್ಥಾಪನೆ ಮಾಡಿದ್ದು. ನಾನು ಕೇಳುವುದು ಎಲ್ಲಿ ಯಾವಾಗ ಇಷ್ಟು ಬೃಹತ್ ಪ್ರಮಾಣದಲ್ಲಿ ಬಯಾಟಿನ್ ರೇಷ್ಮೆ ಉತ್ಪಾದನೆಯಾಗುತ್ತಿದೆ ಸ್ವಾಮಿ? ಯಾವಾಗಲೂ ಇರಲಿಲ್ಲ. ಇದನ್ನು ಯಾವ ಆಧಾರದ ಮೇಲೆ ಸ್ಥಾಪನೆ ಮಾಡಿದಿರಿ? ಉದಾಹರಣೆಗೆ ಗ್ರಾಮೀಣ ಪ್ರದೇಶದಲ್ಲಿ ಒಂದು ಅಕ್ಕಿ ಗಿರಣಿ ಸ್ಥಾಪನೆ ಮಾಡಬೇಕಾದರೆ ಅಲ್ಲಿಂದ ಅರ್ಜಿ ಬಂದ ಮೇಲೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಹೋಗಿ ಅಲ್ಲಿ ನಿಜವಾಗಿಯೂ ಅಕ್ಕಿಯ ಉತ್ಪಾದನೆಯಿದ್ದಿದೆ, ಎಂಬುದನ್ನು ಖಾತ್ರಿಪಡಿಸಿಕೊಂಡು ಅದು ಫೀಸಿಬಲ್ ಎಂದು ಕಂಡು ಬಂದರೆ ಮಾತ್ರ ಲೈಸೆನ್ಸ್ ಕೊಡುತ್ತಾರಲ್ಲವೇ! ಈ ತರಹದಲ್ಲಿ ಯಾವುದೇ ಸರ್ವೆ ಮಾಡದೆಯೇ ಯಾರೋ ದಕ್ಷಿಣ ಕೋರಿಯಾ ಜಪಾನ್‌ಗಳಿಗೆ ಟೂರ್ ಹೊಡೆಯಬಹುದು ಎಂದು ಹಂಚಿಕೆ ಹೂಡಿ ಕೊಂಡು ಕೊಟ್ಟ ಸಲಹೆಯನ್ನು ನೆಚ್ಚಿ ೨೮ ಕೋಟಿ ರೂ.ಗಳಷ್ಟು ಬೃಹತ್‌ಮೊತ್ತವನ್ನು ಈ ಸಂಸ್ಥೆಯಲ್ಲಿ ಹಾಕಿಬಿಟ್ಟಿರಲ್ಲ, ವಾಸ್ತವವಾಗಿ ನಮ್ಮಲ್ಲಿ ಅಷ್ಟೊಂದು ಪ್ರಮಾಣದಲ್ಲಿ ರೇಷ್ಮೆ ಉತ್ಪತ್ತಿ ಆಗುತ್ತಲೇ ಇಲ್ಲ. ಗಣೇಶನನ್ನ ಮಾಡು ಎಂದರೆ ಗಣೇಶನ ಅಪ್ಪನ್ನ ಯಾರೋ ಮಾಡಿದ್ರಂತೆ, ಹಾಗಾಯಿತು ಇದರ ಕತೆ. ಇದನ್ನು ನೋಡಿಕೊಳ್ಳುತ್ತಿದ್ದ ಟಿ. ನರಸೀಪುರ ಕಾರ್ಖಾನೆ ಚೆನ್ನಾಗಿ ಕೆಲಸ ಮಾಡುತ್ತಿತ್ತು. ಇದು ಅನ್ಯಾಯ. ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲವೇ? ಯಾವ ರೀತಿ ಕೆಲಸ ಮಾಡಬೇಕೆಂದು ಯಾರಿಗೂ ಗೊತ್ತಿಲ್ಲ. ಆದ್ದರಿಂದ ಇದನ್ನು ಮೊದಲು ಮುಚ್ಚಿ. ಹೇಗೂ ಆಡಿಟ್‌ರ್‌ರವರ ಅಭಿಪ್ರಾಯ ಕೂಡ ಇದನ್ನು ಮುಚ್ಚುವ ಪರವಾಗೇ ಇದೆ. ಈಗಾಗಲೇ ಬೇಕಾದಷ್ಟು ನಷ್ಟ ಆಗಿದೆ. ಅಲ್ಲದೇ ಸರ್ಕಾರ ಇದಕ್ಕೆ ಕೋಟ್ಯಾಂತರ ರೂ.ಗಳಿಗೆ ಜಾಮೀನು ಬೇರೆ ನಿಂತಿದೆ, ಇದನ್ನು ಯಾವ ತರಹ ತೀರಿಸುವುದು? ಯೋಚನೆ ಮಾಡಿ. ಇದಕ್ಕಾಗಿ ದಕ್ಷಿಣಕೋರಿಯಾ, ಜಪಾನ್‌ಗಳಿಂದ ಕೋಟ್ಯಂತರ ರೂ. ಬೆಲೆ ಬಾಳುವ ಯಂತ್ರಗಳನ್ನು ತರಿಸಿದ್ದೀರಿ. ಆದರೆ ಅದಕ್ಕೆ ಬೇಕಾದ ಕಚ್ಚಾಮಾಲೇ ಸಿಗುತ್ತಿಲ್ಲ, ಇಲ್ಲಿ ಬೇರೆ ತರಹದ ರೇಷ್ಮೆ ಸಂಸ್ಕರಣ ನಡೆಯುತ್ತಿರುವುದರಿಂದ ಬಯಾಟೀನ್ ರೇಷ್ಮೆ ಸಂಸ್ಕರಣಕ್ಕೆಂದು ತಂದ ಯಂತ್ರಗಳೆಲ್ಲ ಬೇಡವಾಗಿವೆ, ರಸ್ಟ್ ಹಿಡಿಯುತ್ತಿವೆ. ಈಗ, ನಮ್ಮ ಸಹಕಾರ ಸಂಘಗಳಲ್ಲಿ ನಷ್ಟವಾದರೆ ಸರ್‌ಚಾರ್ಜೆಂದು ಸಂಬಂಧಪಟ್ಟ ಡೈರೆಕ್ಟರ್ಸ್ ಮೇಲೆಲ್ಲ ಹಾಕಿ ವಸೂಲು ಮಾಡುವ ರೀತಿ ಇಲ್ಲೂ ಇದಕ್ಕೆ ಕಾರಣರಾದವರನ್ನು ಏಕೆ ಮಾಡಿ ಹೆಚ್ಚ ವಸೂಲಿಗೆ ದಾವೆ ಮಾಡದೆ ಏಕೆ ಸುಮ್ಮನಿದ್ದೀರಿ?

ಅಧ್ಯಕ್ಷರು.—ಸಹಕಾರ ಸಂಘಗಳಲ್ಲಿ ಹಣ ತಿಂದವರು ಸಣ್ಣವರಿರುತ್ತಾರೆ, ಅಲ್ಲಿ ವಸೂಲಿ ಮಾಡಿದ್ದಾರೆ, ಇಲ್ಲಿ ದೊಡ್ಡವರಿದ್ದಾರೆ, ಅದಕ್ಕೆ ವಸೂಲಿ ಮಾಡಿಲ್ಲ.

ಶ್ರೀ ಜಿ. ರಾಜೂಗೌಡ.—ಹೌದು ಸ್ವಾಮಿ, ಬಹಳ ಸತ್ಯವಾದ ಮಾತನ್ನು ತಾವು ಆಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಜಕ್ಕೂ ಒಳ್ಳೇ ಮಾತು.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಸರ್ವಕಾಲಿಕವಾದ ಮಾತು.

ಮಾನ್ಯ ಅಧ್ಯಕ್ಷರು.—ಇದು ಹೇಗೆ ಎಂದರೆ, ಆನೆ ಕದ್ದವನನ್ನು ಬಿಟ್ಟು ಅಡಿಕೆ ಕದ್ದವನನ್ನು ಹಿಡಿದಂತೆ.

ಶ್ರೀ ಬಿ. ಬಸವಲಿಂಗಪ್ಪ.—ಈ ಲಕ್ಷ್ಮೀಸಾಗರ್ ಇದೇನು ಹೇಳುತ್ತಿದ್ದಾರೆ? ನೋಡ್ರೀ ನನಗೆ ಏಳು ಜನ ಮಕ್ಕಳು, ನಿಮಗೆ ಎಷ್ಟು ಜನ ಇದ್ದಾರೆ? ನಿಮಗೆ ಅನುಭವ ಇಲ್ಲದೆಯೇ ಎಲ್ಲ ಗೊತ್ತಿರುವವರ ತರಹ ಮಾತನಾಡುತ್ತೀರಿ,

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಅನುಭವ ಪಡೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ರೇಷ್ಮೆ ಇಲಾಖೆಯಲ್ಲಿ ಯಾರ್‍ಯಾರ ಮಾತೋ ಕಟ್ಟಿಕೊಂಡು ೨೮ ಕೋಟಿ ಸುರಿದಿದ್ದೀರಿ, ಅದಕ್ಕೇನು ಮಾಡುತ್ತೀರಿ ಎಂದರೆ ಏನೇನೋ ಹೇಳುತ್ತೀರಲ್ರೀ?

ಅಧ್ಯಕ್ಷರು.—ಅವರು ಮಾಡದಿರುವುದಕ್ಕೆ ಕೆಲವು ತೊಂದರೆ ಇದೆ, ಅದಕ್ಕೆ ಅವರು ನಿಧಾನಿಸುತ್ತಿದ್ದಾರೆ,

ಶ್ರೀ ಜಿ. ರಾಜೂಗೌಡ.—ಬ್ರಿಟಿಷ್‌ರ ಕಾಲದಲ್ಲಿ ಜಿಲ್ಲಾಧಿಕಾರಿಗಳ ಹುದ್ದೆ ಕೊಡುವಾಗ ಅವರು ಐ. ಎ. ಎಸ್. ಪರೀಕ್ಷೆಯನ್ನು ಪಾಸ್ ಮಾಡಿದ್ದರೂ ಕೂಡ ಅನುಭವಬೇಕು ಎಂದು ಅವರು ಐ. ಎ. ಎಸ್. ಪಾಸ್. ಮಾಡಿದ್ದರೂ ೪೦ ವರ್ಷ ವಯಸ್ಸಾದವರನ್ನು ಆ ಹುದ್ದೆಗೆ ತೆಗೆದುಕೊಳ್ಳುತ್ತಿದ್ದರು. ಅಂತಹವರಿಗೆ ಆ ಹುದ್ದೆಯನ್ನು ಕೊಡುತ್ತಿದ್ದರು. ಅದಕ್ಕಿಂತ ಕಡಿಮೆ ವಯಸ್ಸು ಇದ್ದರೆ ಕೊಡುತ್ತಿರಲಿಲ್ಲ. ಅದೇ ರೀತಿ ಇಲ್ಲೂ ಕೂಡ ಅನುಭವ ಮುಖ್ಯ. ಇದು ಅನನುಭವಿಗಳು ಮಾಡಿರತಕ್ಕಂತಹ ಕೆಲಸ ಇದನ್ನು ಯಾವ ರೀತಿ ಸರಿಪಡಿಸಬೇಕೆಂದು ನನಗಂತೂ ಗೊತ್ತಿಲ್ಲ ಇದು ಬಹಳ ಕೆಟ್ಟು ಹೋಗಿದೆ. ದಯಮಾಡಿ ಇವನ್ನು ಸರಿಪಡಿಸಬೇಕು. ಟಿ. ನರಸೀಪುರದಲ್ಲಿನ ಕಾರ್ಖಾನೆಗೆ ೬.೫೯ ಕೋಟಿ ಬಂಡವಾಳವಾಗಿದೆ. ಮೈಸೂರಿನ ಸಿಲ್ಕ್ ವೀವಿಂಗ್ ಫ್ಯಾಕ್ಟರಿಗೆ ೫.೧ ಕೋಟಿ ಬಂಡವಾಳ ಹೂಡಲಾಗಿದೆ. ಟಿ. ನರಸೀಪುರದ ಕಾರ್ಖಾನೆಗೆ ಹೂಡಿರತಕ್ಕಂತಹ ಬಂಡವಾಳ ಏನು ಇದೆ, ಅದರ ಬಡ್ಡಿ ಒಂದು ವರ್ಷಕ್ಕೆ ೬೧ ಲಕ್ಷ ರೂಪಾಯಿ ಆಗುತ್ತದೆ. ಒಂದು ವರ್ಷದಲ್ಲಿ ಯಂತ್ರೋಪಕರಣಗಳ ಡಿಪ್ರಿಸಿಯೇಷನ್‌ನಿಂದ ೩೦ ಲಕ್ಷವಾಗುತ್ತದೆ. ೬೧ ಲಕ್ಷ ಮತ್ತು ೩೦ ಲಕ್ಷ ಹಾಗೂ ಟೀ. ನರಸೀಪುರ ಕಾರ್ಖಾನೆಯದು ೩೩ ಲಕ್ಷ ಎಲ್ಲಾ ಸೇರಿ ೧೬೩ ಲಕ್ಷವಾಗುತ್ತದೆ. ಹತ್ತಿರ ಹತ್ತಿರ ಒಂದೂ ಮುಕ್ಕಾಲು ಕೋಟಿ ರೂಪಾಯಿಯಾಗುತ್ತದೆ. ಇದನ್ನು ನಿಲ್ಲಿಸಿದರೆ ಇಷ್ಟು ನಷ್ಟವಾಗುತ್ತದೆ. ೧೯೮೫-೮೬ರಲ್ಲಿ ಕಚ್ಚಾ ರೇಷ್ಮೆ ಉತ್ಪಾದನೆ ೪೮, ೮೮೩, ೧೯೮೬-೮೭ರಲ್ಲಿ ೪೭ ಸಾವಿರ ಉತ್ಪಾದನೆಯಾಗಿದೆ. ಜವಳಿ ೧೯೮೫-೮೬ರಲ್ಲಿ ೬,೫೮,೪೯೨, ೧೯೮೬-೮೭ರಲ್ಲಿ ೫,೫೮ ೬೮೨ ಮೀಟರ್ ಉತ್ಪಾದನೆ ಆಗಿದೆ ಸ್ಪನ್ ಸಿಲ್ಕ್ ಯಾರ್ನ್ ೧೯೮೫-೮೬ರಲ್ಲಿ ೭೮,೪೭೪/೧೯೮೬ ೮೮ರಲ್ಲಿ ೬೮,೪೬೭ ಕೆ. ಜಿ ಉತ್ಪಾದನೆ ಆಗಿದೆ. ಸೇಲ್ಸ್ ಆಗಿರುವುದ ಎಷ್ಟು ಎಂದರೆ ೧೯೮೫-೮೬ರಲ್ಲಿ ೧೧೭೩.೩೨, ೧೯೮೬-೮೭ರಲ್ಲಿ ೧೪೮೨.೩೨ ನಷ್ಟ ಎಷ್ಟು ಆಗಿದೆ ಎಂದರೆ ೧೯೮೫-೮೬ರಲ್ಲಿ ೩೪೦.೨೨ ೧೯೮೬-೮೭ರಲ್ಲಿ ೪೮೫,೯೬ ಎಲ್ಲಾ ಸೇರಿ ೯,೫೮,೧೭,೦೦೦ ರೂಪಾಯಿ ನಷ್ಟವಾಗಿದೆ. ಕೊನೆಗೆ ೩೦ ಲಕ್ಷವೆಂದು ನಾನು ಏನು ಹೇಳಿದೆ ಅದನ್ನು ಸೇರಿಸಿಕೊಂಡಾಗ ೧,೧೩೧,೧೭ ಲಕ್ಷ ರೂಪಾಯಿನಷ್ಟವಾಗುತ್ತದೆ. ೧೯೮೭ರಲ್ಲಿ ಇದು ಕಾರ್ಯಾಚರಣೆಯನ್ನು ಪ್ರಾರಂಭ ಮಾಡಿದೆ. ಮೂರು ವರ್ಷಕ್ಕೆ ಇಷ್ಟು ನಷ್ಟವಾಗಿದೆ, ಹನ್ನೊಂದೂವರೆ ಕೋಟಿ ನಷ್ಟವಾಗಿದೆ. ಇದಕ್ಕೆ ಯಾರು ಜವಾಬ್ದಾರರು ಇದನ್ನು ನಾವು ಯಾರಿಂದ ವಸೂಲು ಮಾಡುವುದು ? ಇದಕ್ಕೆ ದುಡ್ಡು ಎಲ್ಲಿಂದ ಬಂತು ಇದನ್ನು ಸ್ಯಾಂಕ್ಷನ್ ಮಾಡಿದವರು ಯಾರು ? ಹುಚ್ಚಾಪಟ್ಟೆ ಕೆಲಸವಾಗಿದೆ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ತನಿಖೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇನ್ನು ೧೯೮೮-೮೯ರಲ್ಲಿ ಏನಾಗುತ್ತದೆಯೋ ಗೊತ್ತಿಲ್ಲ. ಲೆಕ್ಕ ಪರಿಶೋಧಕರ ಪ್ರಕಾರ ಈ ಇಲಾಖೆಯ ಪರಿಸ್ಥಿತಿಯು ಬಿಳಿ ಆನೆಯಾಗಿದೆ, ರೇಷ್ಮೆ ಇಲಾಖೆ ಏನೂ ಪ್ರಯೋಜನವಿಲ್ಲ ? ಇದರಲ್ಲಿನ ನಷ್ಟವನ್ನು ತಗ್ಗಿಸಲು ತಾವು ಯಾವ ರೀತಿಯ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರೋ ನನಗಂತೂ ಗೊತ್ತಿಲ್ಲ. ಇದಕ್ಕೆ ಈ ಸದನ ಸಮಿತಿ ಮಾಡಬೇಕು ಎಂದು ನಾನು ಆಗ್ರಹ ಪೂರ್ವಕವಾಗಿ ಹೇಳುತ್ತಿದ್ದೇನೆ. ಮಾನ್ಯ ಮುನಿಯಪ್ಪನವರು ಮಂತ್ರಿಗಳಾಗಿದ್ದಾಗ ರಾಜ್ಯದ ಎಲ್ಲಾ ಫಿಲೇಚರ್ ಫ್ಯಾಕ್ಟರಿಗಳಿಗೂ ಭೇಟಿ ನೀಡಿದ್ದರು. ಅದರ ಕಾರ್ಯ ವೈಖರಿಯನ್ನು ನೋಡಿ ಬಂದಿದ್ದರು. ರೈತರಿಂದ ಬೇಕಾದಷ್ಟು ಸೇವಾ ಶುಲ್ಕದ ರೂಪದಲ್ಲಿ ಹಣ ಬರುತ್ತಿದೆ ಪ್ರತಿಯೊಂದು ಮಾರುಕಟ್ಟೆಯ ಪಕ್ಕದಲ್ಲೂ ಕೃಷಕರ ಭವನ ಮತ್ತು ಕುಡಿಯುವ ನೀರಿನ ಸೌಲಭ್ಯ

ಮಾಡುತ್ತೇವೆಂದು ಹಿಂದಿನ ಸಚಿವರು ಭರವಸೆ ಕೊಟ್ಟಿದ್ದರು. ಆದರೆ ಅವರು ಈಗ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅವರು ಕೊಟ್ಟಂತಹ ಭರವಸೆಯನ್ನು ತಾವು ಕಾರ್ಯಗತ ಮಾಡಬೇಕು ಅದನ್ನು ಕಾರ್ಯಗತ ಮಾಡುವ ಜವಾಬ್ದಾರಿ ತಮ್ಮ ಮೇಲಿದೆ. ತಾವು ಇದನ್ನು ಮಾಡಬೇಕು. ಪ್ರತಿಯೊಂದು ಮಾರ್ಕೆಟ್ಟಿನ ಪಕ್ಕದಲ್ಲೂ ರೇಷ್ಮೆ ಭವನವನ್ನು ಕಟ್ಟಿಸಬೇಕು. ಇದು ಅತಿ ಮುಖ್ಯವಾದಂಥಾದ್ದು. ಇಡೀ ರಾಜ್ಯದಲ್ಲಿ ರಾಮನಗರ, ಕೊಳ್ಳೇಗಾಲ, ಶಿಡ್ಲಘಟ್ಟ ಈ ಮೂರು ಮಾತ್ರ ಬಹಳ ಮುಖ್ಯವಾದುದು, ಈ ಕೇಂದ್ರಗಳಲ್ಲಿ ಮಾತ್ರ ಇದನ್ನು ಮಾಡಲೇಬೇಕು. ಕುಡಿಯುವ ನೀರಿನ ಮತ್ತು ತಂಗುದಾಣದ ವ್ಯವಸ್ಥೆ ಮಾಡಬೇಕು. ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಏನು ಮಾರುಕಟ್ಟೆಗಳನ್ನು ಮಾಡಿದ್ದೀರಿ ಅಲ್ಲಿನ ಬಸ್ ಸ್ಟ್ಯಾಂಡಿನಿಂದ ರೇಷ್ಮೆ ವಿನಿಮಯ ಕೇಂದ್ರ ಅಂದರೆ ಮಾರ್ಕೆಟ್ಟಿನ ತನಕ ಒಂದು ಮಂಕರಿ ಗೂಡನ್ನು ತರಲು ೧೦-೧೫ ರೂಪಾಯಿ ತೆಗೆದುಕೊಳ್ಳುತ್ತಾರೆ. ದಯಮಾಡಿ ಇದನ್ನು ಸಾಗಾಣಿಕೆ ಮಾಡಲು ಒಂದು ವ್ಯಾನ್ ಅನ್ನು ಇಡಬೇಕು. ಬಸ್ ಸ್ಟ್ಯಾಂಡಿನಿಂದ ರೇಷ್ಮೆ ವಿನಿಮಯ ಕೇಂದ್ರದ ಮಾರುಕಟ್ಟೆಗೆ ಗೂಡನ್ನು ಸಾಗಾಣಿಕೆ ಮಾಡತಕ್ಕಂತಹ ವ್ಯವಸ್ಥೆಯನ್ನು ಈ ಮೂಲಕ ಮಾಡಬೇಕು. ಅದರಲ್ಲೂ ಮುಖ್ಯವಾಗಿ ರಾಮನಗರ, ಕೊಳ್ಳೇಗಾಲ, ಶಿಡ್ಲಘಟ್ಟ ಈ ಮೂರು ಕೇಂದ್ರಗಳಲ್ಲಿ ವ್ಯಾನಿನ ವ್ಯವಸ್ಥೆಯನ್ನು ಮಾಡಬೇಕು,

೫-೩೦ ಪಿ. ಎಂ.

ಮತ್ತೆ ನಮ್ಮ ರಾಜ್ಯದಲ್ಲಿ ಸುಮಾರು ೨೭-೨೮ ಸಿಲ್ಕ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳಿವೆ. ಇವುಗಳಲ್ಲಿ ಕೆಲವುಗಳು ಚೆನ್ನಾಗಿ ಕಾರ್ಯ ಮಾಡುತ್ತಿವೆ, ಮತ್ತೆ ಕೆಲವು ನಷ್ಟದಲ್ಲಿವೆ. ತಾವು ರೀಲರ್‌ಗಳಿಗೆ ಸಾಲವನ್ನು ಕೊಟ್ಟಿದ್ದೀರಿ ಸಾಲವನ್ನು ಪಡೆದಂಥ ಅನೇಕ ರೀಲರ್‌ಗಳು ಸಕಾಲದಲ್ಲಿ ಅವರಿಗೆ ಕೊಡಲಿಕ್ಕೆ ಆಗದೇ ಶೇಕಡಾ ೧೫-೨೦ ಬಡ್ಡಿಯನ್ನು ತುಂಬಲಿಕ್ಕೆ ಆಗದೇ ಅವರು ತುಂಬಾ ತೊಂದರೆಗೆ ಒಳಗಾಗಿದ್ದಾರೆ. ದಯಮಾಡಿ ಈ ರೇಷ್ಮೆ ಕೃಷಿಕರಿಗೆ ಮತ್ತು ರೇಷ್ಮೆ ರೀಲರ್‌ಗಳಿಗೆ ತಾವು ಏನು ಮೊದಲು ೫೦ ಪರ್ಸೆಂಟ್ ಬಡ್ಡಿಯ ರಿಯಾಯಿತಿಯನ್ನು ಕೊಟ್ಟಿದ್ದೀರೋ ಅದೇ ರೀತಿ ಈಗಲೂ ಕೂಡಾ ಅವರಿಗೆ ಕೊಟ್ಟರೆ ನಮಗೆ ಬರಬೇಕಾಗಿರತಕ್ಕಂಥ ಸಾಲ ಪೂರಾ ವಸೂಲಾಗುತ್ತದೆ. ದಯಮಾಡಿ ತಾವು ಒಂದು ಗಡುವನ್ನು ಫಿಕ್ಸ್ ಮಾಡಿ ಆ ಗಡುವಿನೊಳಗಾಗಿ ಪೂರ್ತಿ ಹಣವನ್ನು ತೀರಿಸಿದರೆ ೫೦-೬೦-೭೦ ಪರ್ಸೆಂಟ್ ಬಡ್ಡಿಯನ್ನು ರಿಯಾಯಿತಿ ಕೊಡುತ್ತೇವೆ ಎಂದು ಒಂದು ಘೋಷಣೆಯ ಮಾಡಿದರೆ ನಮಗೆ ಬರಬೇಕಾಗಿರತಕ್ಕಂಥ ಸಾಲವೆಲ್ಲಾ ಒಮ್ಮೆಲೇ ಬರುತ್ತದೆ ಎಂದು ನನ್ನ ಭಾವನೆ ಇದರಿಂದ ಸಿಲ್ಕ್ ಇಂಡಸ್ಟ್ರಿಯಲ್ ಫ್ಯಾಕ್ಟರಿಗೂ ಒಳ್ಳೆಯದಾಗುತ್ತದೆ ಹಾಗೂ ಅದು ಮತ್ತೆ ಪುನಶ್ಚೇತನಗೊಂಡಂತೆ ಆಗುತ್ತದೆ. ಮತ್ತೆ ಹೊಸ ರೀಲರ್‌ಗಳಿಗೆ ಸಾಲ ಕೊಟ್ಟ ಹಾಗೆ ಆಗುತ್ತದೆ. ಈ ಕೆಲಸವನ್ನು ತಾವು ದಯಮಾಡಿ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ತಕಾವಿ ಸಾಲ ಎಂದು ಹೇಳಿ ಕಡ್ಡಿ ಹಾಕಲಿಕ್ಕೆ ಬಾವಿ ತೋಡಲಿಕ್ಕೆ ಈ ರೇಷ್ಮೆ ಕೃಷಿಕರು ಏನು ಇದ್ದಾರೆ, ಅವರುಗಳಿಗೆ ೮೪ರಲ್ಲಿ ಕೊಟ್ಟಂಥ ಸಾಲದ ಬಗ್ಗೆ ಹೇಳುವುದಾದರೆ, ಎರಡು ಲಕ್ಷ ರೂಪಾಯಿ ಸಾಲವನ್ನು ತೆಗೆದು ಕೊಂಡಿದ್ದರೆ ೮೦ ಸಾವಿರ ರೂಪಾಯಿ ಬಡ್ಡಿಯಾಗಿದೆ. ಒಂದುಕಾಲು ಲಕ್ಷ ರೂಪಾಯಿ ಪೀನಲ್ ಇಂಟರೆಸ್ಟ್ ಆಗಿದೆ. ಅವರು ಎಲ್ಲಿಂದ ಕೊಡಲಿಕ್ಕೆ ಸಾಧ್ಯವಾಗುತ್ತದೆ ? ಇನ್ನು ಚೀಫ್ ಮಿನಿಸ್ಟರ್‌ರವರು ೪೪ ಕೋಟಿ ರೂಪಾಯಿ ರಿಯಾಯಿತಿ ಕೊಡುತ್ತೇವೆಂದು ಏನು ಅನೌನ್ಸ್ ಮಾಡಿದ್ದಾರೆ, ಅದರಲ್ಲಿ ಇದು ಸೇರಿದೆಯೋ ಇಲ್ಲವೋ ಗೊತ್ತಿಲ್ಲ. ದಯಮಾಡಿ ಅದನ್ನು ತೆಗೆಸಿ ನೋಡಬೇಕಾಗುತ್ತದೆ. ಆದ್ದರಿಂದ ಅವರುಗಳ ಸಾಲವನ್ನು ವಜಾ ಮಾಡಬೇಕೆಂದು ಹೇಳುತ್ತೇನೆ. ಸಾಲವನ್ನು ವಜಾ ಮಾಡಲಿಕ್ಕೆ ಆಗದೇ ಇದ್ದರೆ ಅವರು ಕೊಡತಕ್ಕಂಥ ಬಡ್ಡಿಯನ್ನಾದರೂ ವಜಾ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ತಮ್ಮ ಸಾಲವನ್ನೆಲ್ಲಾ ರೈತರು ಕೊಡಲಿಕ್ಕೆ ಅನುಕೂಲವಾಗುತ್ತದೆ ಇದರ ಬಗ್ಗೆ ತಾವು ಅಧಿಕಾರಿಗಳನ್ನು ಕರೆಸಿ ಮಾತನಾಡಬೇಕು. ಚೀಫ್ ಮಿನಿಸ್ಟರ್‌ಗೂ ಬೇಕಾದಷ್ಟು ಅರ್ಜಿಗಳನ್ನು ಕೂಡಾ ಕೊಟ್ಟಿದ್ದೇವೆ, ಮುಖ್ಯ ಕಾರ್ಯ ದರ್ಶಿಯವರಿಗೂ ಕೂಡಾ ಕೊಟ್ಟಿದ್ದೇವೆ, ಫೈನಾನ್ಸ್ ಸೆಕ್ರೆಟರಿಯವರಿಗೂ ಕೂಡಾ ಅರ್ಜಿಯನ್ನು ಕೊಟ್ಟಿದ್ದೇವೆ. ಇವನ್ನು ದಯಮಾಡಿ ತಾವು ನೋಡಿ ಇದನ್ನು ವಜಾ ಮಾಡುವುದಕ್ಕೆ ಏರ್ಪಾಡು ಮಾಡತಕ್ಕಂಥ ಒಂದು ಕೆಲಸವನ್ನು ತಾವು ಮಾಡಬೇಕು. ಫಿಲೇಚರ್‌ನಲ್ಲಿ ಸಾಕಷ್ಟು ಅವ್ಯವಹಾರವಾಗಿದೆ. ತಾವು ಇದರ ಬಗ್ಗೆ ಸಂಬಳ ಕೊಡ

ವುದರಲ್ಲಿ ಮಾತ್ರ ನಷ್ಟವಾಗಿದೆ, ಬೇರೆ ಏನೂ ಇಲ್ಲ ಎಂದು ತಮ್ಮ ಭಾವನೆ ಇರಬಹುದು. ಹೇಳತಕ್ಕಂಥ ಇನ್ನೂ ಕೆಲವು ವಿಷಯಗಳಿವೆ. ತಾವು ಒಂದು ಇದರ ಬಗ್ಗೆ ಸದನದ ಸಮಿತಿಯನ್ನು ಮಾಡಿದಾಗ ಅಥವಾ ತಮ್ಮ ಛೇಂಬರ್‌ನಲ್ಲಿ ಒಂದು ಮೀಟಿಂಗ್‌ನ್ನು ನಡೆಸಿದಾಗ ಯಾವ ಯಾವ ಬಾಬ್ತಿನಲ್ಲಿ ಎಷ್ಟೆಷ್ಟು ನಷ್ಟವಾಗಿದೆ ಎನ್ನತಕ್ಕಂಥದ್ದು ನಿಖರವಾಗಿ ಆಗ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ತಾವು ದಯಮಾಡಿ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ, ನಾನು ಈ ಮೊದಲೇ ಕೇಳಿಕೊಂಡಂತೆ ಮಳೆ ಆಶ್ರಯದಿಂದ ಬೆಳೆಯತಕ್ಕಂಥ ರೇಷ್ಮೆ ಕಡ್ಡಿ ಏನು ಇದೆ, ಆ ಜಮೀನುಗಳೆಲ್ಲಾ ನೀರಾವರಿಗೆ ಒಳಪಡಿಸತಕ್ಕಂಥ ಪ್ರಯತ್ನ ಮಾಡಿದಾಗ ಹೆಚ್ಚು ರೇಷ್ಮೆಯನ್ನು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ ಇದರ ಬಗ್ಗೆ ತಮ್ಮ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳಿ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಎಕರೆಯಲ್ಲಿ ಈ ಮಳೆಯ ಆಶ್ರಯದಿಂದಲೇ ಬೆಳೆಯುತಕ್ಕಂಥ ಕಡ್ಡಿ ಇದೆ, ಅವರಿಗೆಲ್ಲಾ ಬೇರೆ ವ್ಯವಸ್ಥೆಯನ್ನು ಮಾಡಬಹುದು. ನಮ್ಮ ದೇಶದಲ್ಲಿ ಉತ್ಪತ್ತಿ ಆಗತಕ್ಕಂಥ ಒಟ್ಟು ರೇಷ್ಮೆಯನ್ನು ನಮ್ಮ ರಾಜ್ಯದಲ್ಲಿಯೇ ಉತ್ಪತ್ತಿ ಮಾಡಬಹುದು. ಆಗ ಯಾವಾಗಲೂ ನೇಕಾರರಿಗೆ ತೊಂದರೆಯಾಗುವುದಿಲ್ಲ. ಬೆಲೆ ದುಬಾರಿಯಾಗುವುದಿಲ್ಲ. ಹೊರದೇಶಕ್ಕೆ ರಫ್ತು ಮಾಡುವುದು ಕೂಡಾ ಅನಾವಶ್ಯಕ. ಆದುದರಿಂದ ಈ ಎಲ್ಲಾ ಕಾರ್ಯ ಕ್ರಮಗಳನ್ನು ಕೈಗೊಂಡರೆ ನಮ್ಮ ನೇಕಾರರಿಗೆ, ಹಾಗೂ ಎಲ್ಲಾ ವರ್ಗದವರಿಗೂ ಕೆಲಸ ಸಿಗುವ ಹಾಗೆ ಆಗುತ್ತದೆ. ದಯಮಾಡಿ ಈ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ಈ ಬೇಡಿಕೆಯ ಬಗ್ಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಂದಿನ ಸಭೆಯನ್ನು ನಾಳೆ ಬೆಳಿಗ್ಗೆ ೯ ಗಂಟೆಗೆ ಮುಂದೂಡಲಾಗಿದೆ.

(ಸದನವು ೫–೩೩ ಗಂಟೆಗೆ ಮುಕ್ತಾಯಗೊಂಡು ಮತ್ತೆ ದಿನಾಂಕ ೨೭ ೫–೧೯೮೮ರಂದು ಶುಕ್ರವಾರ ಬೆಳ್ಳಿಗೆ ೯ ಗಂಟೆಗೆ ಸೇರಲು ತೀರ್ಮಾನಿಸಿತು.)